ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಡಿಸೆಂಬರ್ 07, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 205 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಅಂಬೇಡ್ಕರ್ ತತ್ವ, ಸಿದ್ಧಾಂತಗಳು ವಿಶ್ವಕ್ಕೇ ಮಾದರಿ

### ಡಾ. ಅಂಬೇಡ್ಕರ್ 67ನೇ ಮಹಾಪರಿನಿರ್ವಾಣ ದಿನಾಚರಣೆಯಲ್ಲಿ ಡಿಸಿ ವೆಂಕಟೇಶ್

ದಾವಣಗೆರೆ, ಡಿ. 6- ಡಾ. ಬಿ.ಆರ್. ಅಂಬೇಡ್ಕರ್‌ರವರು ಹಾಕಿಕೊಟ್ಟಂತಹ ಸಂವಿಧಾನ ಮತ್ತು ತತ್ವ, ಸಿದ್ಧಾಂತಗಳು ಕೇವಲ ಒಂದು ದೇಶಕ್ಕೆ ಸೀಮಿತವಾಗದೇ ಇಡೀ ವಿಶ್ವಕ್ಕೇ ಮಾದರಿಯಾಗಿರುವಂತವು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ 67ನೇ ಮಹಾಪರಿನಿರ್ವಾಣ ದಿನಾಚರಣೆ ಅಂಗವಾಗಿ ಡಾ.ಬಿ.ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಡಾ.ಬಿ.ಆರ್ ಅಂಬೇಡ್ಕರ್ ಅವರು ನಮ್ಮ ದೇಶ ಕಂಡ ಮಹಾನ್ ಸಾಮಾಜಿಕ ಪರಿವರ್ತಕ, ಆರ್ಥಿಕ ಶಾಸ್ತ್ರಜ್ಞರಾಗಿದ್ದು, ಅವರು ರಚಿಸಿದಂತಹ ಸಂವಿಧಾನದಿಂದ ರಾಜಕೀಯ, ಸಾಮಾಜಿಕ ಸ್ವಾತಂತ್ರ್ಯವನ್ನು ಹೊಂದಲು ಸಾಧ್ಯವಾಗಿದೆ ಎಂದರು.

ಅಂಬೇಡ್ಕರ್‌ರವರು ಚಿಕ್ಕ ವಯಸ್ಸಿನಲ್ಲಿಯೇ ಶ್ರೇಣೀಕೃತ ಸಮಾಜದಲ್ಲಿ ಅನುಭವಿಸಿದ ಸಂಕಷ್ಟ, ಶೋಷಣೆ ಹಾಗೂ ಮೌಢ್ಯಗಳ ವ್ಯವಸ್ಥೆಯನ್ನು ಸಾಮಾಜಿಕವಾಗಿ ಬದಲಾವಣೆ ಮಾಡಬೇಕು ಮತ್ತು ಸಮಾಜದ ಕಟ್ಟಕಡೆಯ ಸಮುದಾಯವಾಗಿ ಜೀವನ ನಡೆಸುತ್ತಿದ್ದ ದಲಿತರಿಗೂ ಸಹ ಪರಿಪೂರ್ಣವಾದಂತಹ ಜೀವನ ಅವಕಾಶವನ್ನು ಒದಗಿಸಿಕೊಡಲು ಹಗಲು-ರಾತ್ರಿ ಕಷ್ಟಪಟ್ಟು ಭಾರತಕ್ಕೆ ವಿಶಾಲವಾದಂತಹ ಸಂವಿಧಾನವನ್ನು ರಚಿಸಿ ಕೊಟ್ಟರು.

ಈ ಸಂವಿಧಾನದಲ್ಲಿ ಬಸವ ತತ್ವವಿದೆ, ಕೀರ್ತನಕಾರರ ಎಲ್ಲಾ ರೀತಿಯ ವಿಚಾರಧಾರೆಗಳೂ ಅಡಕವಾಗಿವೆ. ಹಾಗೆಯೇ ಪ್ರತಿಯೊಬ್ಬರಿಗೂ ಕಾನೂನಿನಲ್ಲಿ ಸಮಾನ ಅವಕಾಶ ನೀಡಿದ್ದು, ಈ ಅವಕಾಶದಿಂದಲೇ ಇಂದು ಒಬ್ಬ ಮಹಿಳೆ ದೇಶದ ರಾಷ್ಟ್ರಪತಿಯಾಗಲು ಸಾಧ್ಯವಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿ.ಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್.ಬಿ.ಇಟ್ನಾಳ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾಗರಾಜ್.ಕೆ ಇತರರು ಈ ಸಂದರ್ಭದಲ್ಲಿದ್ದರು.

## ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಪ್ರತ್ಯೇಕ ವಿಭಾಗ

ಬೆಳಗಾವಿ, ಡಿ. 6 - ಸರ್ಕಾರಿ ಒತ್ತುವರಿ ಭೂಮಿ ತೆರವುಗೊಳಿಸಿ, ಸಂರಕ್ಷಿಸಲು ಪ್ರತ್ಯೇಕ ವಿಭಾಗ ಸ್ಥಾಪಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಯು.ಬಿ. ವೆಂಕಟೇಶ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೋಟ್ಯಂತರ ರೂ. ಬೆಲೆ ಬಾಳುವ ನಮ್ಮ ಒತ್ತುವರಿ ಭೂಮಿಯನ್ನು ತೆರವುಗೊಳಿಸುವ ವಿಚಾರದಲ್ಲಿ ಸರ್ಕಾರ ಗಂಭೀರವಾಗಿದೆ ಎಂದರು.

ನಾವು ಅಧಿಕಾರಕ್ಕೆ ಬಂದ ನಂತರ ನೂರಾರು ಕೋಟಿ ರೂ. ಮೌಲ್ಯದ ಭೂಮಿಯ ಒತ್ತುವರಿಯನ್ನು ತೆರವುಗೊಳಿಸಿ, ಸಂರಕ್ಷಿಸಲಾಗಿದೆ.

ಸರ್ಕಾರಿ ಭೂಮಿ ಒತ್ತುವರಿಗೆ ಸಂಬಂಧಿಸಿದಂತೆ ನಮ್ಮ ಮುಂದೆ ಎರಡು-ಮೂರು ವರದಿಗಳಿದ್ದು ಅವುಗಳನ್ನು ಮುಂದಿಟ್ಟುಕೊಂಡು ತೆರವು ಕಾರ್ಯ ನಡೆದಿದೆ.

ಒತ್ತುವರಿ ತೆರವಿಗಾಗಿ ನಾನು ಈಗಾಲೇ ಎರಡು-ಮೂರು ಬಾರಿ ಉನ್ನತ ಮಟ್ಟದ ಸಭೆ ನಡೆಸಿದ್ದೇನೆ, ಅಲ್ಲದೆ, ವಿಭಾಗೀಯ ಮಟ್ಟದಲ್ಲೂ ಸಭೆ ನಡೆಸಿ ತೆರವಿಗೆ ಕಠಿಣ ಕ್ರಮಕೈಗೊಂಡಿದ್ದೇವೆ ಎಂದು ಹೇಳಿದರು.

ಇನ್ನೂ ರಾಜ್ಯದ ನಗರ, ಪಟ್ಟಣ ಸೇರಿದಂತೆ ವಿವಿಧ ಭಾಗಗಳಲ್ಲಿ ಸಾವಿರಾರು ಎಕರೆ ಭೂಮಿ ಒತ್ತುವರಿಯಾಗಿದೆ, ಇದನ್ನು ತೆರವುಗೊಳಿಸಲು ಪ್ರತ್ಯೇಕ ವಿಭಾಗ ರಚಿಸಿ ಅದರ ಮೂಲಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.



> **ಕೆರೆ ಒತ್ತುವರಿ, ಮುಜರಾಯಿ, ವಕ್ಫ್ ಆಸ್ತಿಗಳ ಸರ್ವೆ ನಡೆಸಿ, ಗಡಿ ಗುರುತಿಸಿ ರಕ್ಷಿಸಲಾಗುವುದು.**
>
> **ಎಷ್ಟೇ ಬಲಾಢ್ಯರಿದ್ದರೂ ನಮ್ಮ ಭೂಮಿಯನ್ನು ಹಿಂದಕ್ಕೆ ಪಡೆಯುವ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ.**

ಈ ವಿಭಾಗದಲ್ಲಿ ನಮ್ಮ ಅಧಿಕಾರಿಗಳ ಜೊತೆಗೆ ಪೊಲೀಸ್ ಹಾಗೂ ಕಾನೂನು ತಜ್ಞರನ್ನು ಬಳಸಿಕೊಂಡು ತೆರವು ಮಾಡಲಾಗುವುದು. ಎಷ್ಟೇ ಬಲಾಢ್ಯರಿದ್ದರೂ ನಮ್ಮ ಭೂಮಿಯನ್ನು ಹಿಂದಕ್ಕೆ ಪಡೆಯುವ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ಇದು ಕೇವಲ ಕಂದಾಯ ಇಲಾಖೆಗೆ ಸೀಮಿತವಾಗಿರದೆ, ಕೆರೆ ಒತ್ತುವರಿ, ಮುಜರಾಯಿ, ವಕ್ಫ್ ಆಸ್ತಿಗಳ ಸರ್ವೆ ನಡೆಸಿ, ಗಡಿ ಗುರುತಿಸಿ ರಕ್ಷಿಸಲಾಗುವುದು. ಅಲ್ಲದೆ, ಈ ಆಸ್ತಿಗಳ ಡಿಜಿಟಲ್ ಡೇಟಾ ಬೇಸ್ ನಿರ್ವಹಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಎನ್. ರವಿಕುಮಾರ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬರದಿಂದಾಗಿ ರೈತರು ಸಂಕಷ್ಟಕ್ಕೆ ಒಳಗಾಗಿದ್ದು, ಅವರ ನೆರವಿಗೆ ಸರ್ಕಾರ ಬದ್ಧವಾಗಿದೆ, ಬೆಳೆ ವಿಮೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್‌ನಿಂದ 4,000 ಕೋಟಿ ರೂ. ಪರಿಹಾರ ನೀಡುವ ಆಲೋಚನೆ ಇದೆ. ಈ ವಿಚಾರದಲ್ಲಿ ವಿರೋಧ ಪಕ್ಷದ ಸಲಹೆಗಳನ್ನೂ ಪರಿಗಣಿಸಲಾಗುವುದು ಎಂದರು.

ರಾಜ್ಯದಲ್ಲಿ ಕಳೆದ ಎರಡು ದಶಕಗಳಲ್ಲಿ 14 ಬಾರಿ ಬರ ಪರಿಸ್ಥಿತಿ ಎದುರಿಸಿದೆ. ಈ ವರ್ಷ ಬರ ಸ್ಥಿತಿ ಮತ್ತಷ್ಟು ತೀವ್ರವಾಗಿದೆ. 223 ತಾಲೂಕುಗಳನ್ನು ಈಗಾಗಲೇ ಬರಪೀಡಿತವೆಂದು ಘೋಷಿಸಲಾಗಿದೆ, 18,200 ಕೋಟಿ ರೂ. ಪರಿಹಾರ ಕೋರಿ ಕೇಂದ್ರಕ್ಕೂ ಪತ್ರ ಬರೆಯಲಾಗಿದೆ, ಕೇಂದ್ರದಿಂದ ಇದುವರೆಗೂ ಹಣ ಬಿಡುಗಡೆಯಾಗಿಲ್ಲ ಎಂದು ಹೇಳಿದರು.

ರೈತರ ಸಂಕಷ್ಟಕ್ಕೆ ಕೂಡಲೇ (3ನೇ ಪುಟಕ್ಕೆ)

### ಮುಸ್ಲಿಂ ಸಮುದಾಯಕ್ಕೆ 10 ಸಾವಿರ ಕೋಟಿ

## ಸದನದಲ್ಲಿ ಭಾರೀ ಕೋಲಾಹಲ ಬಿಜೆಪಿ ಸದಸ್ಯರಿಂದ ಸಭಾತ್ಯಾಗ

ಬೆಳಗಾವಿ, ಡಿ. 6 - ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ 10,000 ಕೋಟಿ ರೂ. ನೀಡುವುದಾಗಿ ಮಾಡಿದ ಘೋಷಣೆ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ ಭಾರೀ ಕೋಲಾಹಲಕ್ಕೆ ಕಾರಣವಾಯಿತು.

ಪ್ರಶ್ನೋತ್ತರ ವೇಳೆ ಮುಗಿಯುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ಬಿಜೆಪಿ ಸದಸ್ಯರು, ಮುಖ್ಯಮಂತ್ರಿ ಅವರು ನೀಡಿರುವ ಹೇಳಿಕೆಯನ್ನು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ ಸಮರಕ್ಕೆ ಎಡೆ ಮಾಡಿಕೊಟ್ಟಿತು. ಪ್ರತಿಪಕ್ಷಗಳ ಒತ್ತಡಕ್ಕೆ ಸರ್ಕಾರ ಮಣಿಯದಿದ್ದಾಗ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಇದಕ್ಕೂ ಮುನ್ನ ದೇಶದ ಆಸ್ತಿಯಲ್ಲಿ ಮುಸ್ಲಿಮರಿಗೂ ಹಂಚಿಕೆ ಮಾಡುತ್ತೇನೆ ಎಂದು ಹುಬ್ಬಳ್ಳಿಯಲ್ಲಿ ನಡೆದ ಅಲ್ಪ ಸಂಖ್ಯಾತರ ಸಭೆಯಲ್ಲಿ ಮುಖ್ಯಮಂತ್ರಿ ಅವರು ನೀಡಿರುವ ಹೇಳಿಕೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಪ್ರತಿಪಕ್ಷದ ಸದಸ್ಯರು ಹೇಳಿದರು.

ಇದು ನಿಮ್ಮ ಮನೆಯ ಸ್ವಂತ ಆಸ್ತಿಯಲ್ಲ, ನೂರಾರು ಕೋಟಿ ಜನರ ಬೆವರಿನಿಂದ ಕಟ್ಟಿದ ರಾಷ್ಟ್ರ, ನೀವು ಸದನ ನಡೆಯುವಾಗ (3ನೇ ಪುಟಕ್ಕೆ)

## ಗಾರ್ಬಾ ನೃತ್ಯಕ್ಕೆ ಯುನೆಸ್ಕೊ ಮಾನ್ಯತೆ

ಅಹಮದಾಬಾದ್, ಡಿ. 6 – ಗುಜರಾತ್‌ನ ಸಾಂಪ್ರದಾಯಿಕ ಗಾರ್ಬಾ ನೃತ್ಯಕ್ಕೆ ಯುನೆಸ್ಕೋ ಮಾನ್ಯತೆ ದೊರೆತಿದೆ. ಈ ನೃತ್ಯವು ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆ ಎಂದು ಯುನೆಸ್ಕೋ ಪರಿಗಣಿಸಿದೆ ಎಂದು ಗುಜರಾತ್ ಮುಖ್ಯ ಮಂತ್ರಿ ಭೂಪೇಂದ್ರ ಪಟೇಲ್ ತಿಳಿಸಿದ್ದಾರೆ. ಗುಜರಾತ್ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ನವರಾತ್ರಿ ಉತ್ಸವದ ವೇಳೆ ಗಾರ್ಬಾ ನೃತ್ಯದ ಪ್ರದರ್ಶನ ನಡೆಯುತ್ತದೆ.

## ಪರೀಕ್ಷಾ ಅವ್ಯವಹಾರ 10 ವರ್ಷ ಜೈಲು

ಬೆಳಗಾವಿ, ಡಿ. 6 – ಸಾರ್ವಜನಿಕ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಅವ್ಯವಹಾರ ತಡೆಯುವ ಸಲುವಾಗಿ ರಾಜ್ಯ ಸರ್ಕಾರ ಮಸೂದೆ ಯೊಂದನ್ನು ವಿಧಾನಸಭೆಯಲ್ಲಿ ಮಂಡಿಸಿದೆ.

> **ಮಸೂದೆ ಮಂಡನೆ**

ಪರೀಕ್ಷಾ ಅವ್ಯವಹಾರ ನಡೆಸುವವರಿಗೆ 10 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ 10 ಕೋಟಿ ರೂ.ಗಳವರೆಗೆ ದಂಡ ವಿಧಿಸಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ (2ನೇ ಪುಟಕ್ಕೆ)

### ಕಾಶ್ಮೀರದ 2 ಮಸೂದೆಗಳಿಗೆ ಲೋಕಸಭೆ ಒಪ್ಪಿಗೆ

## ಪಾಕ್ ಆಕ್ರಮಿತ ಕಾಶ್ಮೀರವೂ ಸಹ ನಮ್ಮದೇ ಎಂದ ಅಮಿತ್ ಷಾ



ನವದೆಹಲಿ, ಡಿ. 6 – ಲೋಕಸಭೆಯು ಜಮ್ಮು ಮತ್ತು ಕಾಶ್ಮೀರ ಮೀಸಲಾತಿ (ತಿದ್ದುಪಡಿ) ಮಸೂದೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪುನರ್ವಿಂಗಡಣೆ (ತಿದ್ದು ಪಡಿ) ಮಸೂದೆಗಳಿಗೆ ಒಪ್ಪಿಗೆ ನೀಡಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಪುನರ್ವಿಂಗಡಣೆಯ ನಂತರ ಜಮ್ಮು ವಲಯದ ವಿಧಾನಸಭಾ ಸ್ಥಾನಗಳ ಸಂಖ್ಯೆ 37ರಿಂದ 43ಕ್ಕೆ ಹೆಚ್ಚಳವಾಗಲಿದೆ. ಕಾಶ್ಮೀರ ಕಣಿವೆಯ ಸ್ಥಾನಗಳ ಸಂಖ್ಯೆ 46ರಿಂದ 47ಕ್ಕೆ ಹೆಚ್ಚಾಗಲಿದೆ ಎಂದು ಹೇಳಿದರು. ಅಲ್ಲದೇ, ಕಾಶ್ಮೀರ ವಲಸಿಗರಲ್ಲಿ ಇಬ್ಬರನ್ನು ವಿಧಾನಸಭೆಗೆ ನೇಮಿಸಲಾಗುವುದು. ಇದರಲ್ಲಿ ಒಬ್ಬರು ಮಹಿಳೆಯಾಗಿರಲಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಒಂದು ಸ್ಥಾನವನ್ನು ಪಾಕ್ (3ನೇ ಪುಟಕ್ಕೆ)

## ಜನವರಿ ಅಂತ್ಯದೊಳಗೆ ಕಂದಾಯ ಗ್ರಾಮಗಳ ಘೋಷಣೆ

ಬೆಳಗಾವಿ, ಡಿ. 6 - ತಾಂಡಾ, ಹಟ್ಟಿ, ಒಡ್ಡರಹಟ್ಟಿ, ಗೊಲ್ಲರಹಟ್ಟಿ ಸೇರಿದಂತೆ ಎಲ್ಲಾ ಜನವಸತಿ ಪ್ರದೇಶಗಳನ್ನೂ ಜನವರಿ ಅಂತ್ಯದೊಳಗೆ ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ವಿಧಾನ ಪರಿಷತ್‌ನಲ್ಲಿಂದು ಪ್ರಕಟಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಎಂ. ನಾಗರಾಜು ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟಾರೆ 3,290 ಜನವಸತಿ ಪ್ರದೇಶಗಳು ಕಂದಾಯ ಗ್ರಾಮಗಳಾಗಿ ಘೋಷಣೆಯಾಗಬೇಕಿತ್ತು. ಆದರೆ, ಕಳೆದ ನಾಲ್ಕು ವರ್ಷದಲ್ಲಿ ತಾಂಡಾ, ಗೊಲ್ಲರಹಟ್ಟಿ ಸೇರಿದಂತೆ ಕೇವಲ 1,400 ಜನವಸತಿ ಪ್ರದೇಶಗಳನ್ನು ಮಾತ್ರ ಕಂದಾಯ ಗ್ರಾಮಗಳಾಗಿ ಘೋಷಿಸಲಾಗಿದೆ ಎಂದು ಹೇಳಿದರು.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದಲೂ ನಮಗೆ ಸೂಚನೆ ಬಂದಿದ್ದು, ಜನವರಿ ಅಂತ್ಯದೊಳಗೆ ಎಲ್ಲಾ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಘೋಷಿಸಲಾಗುವುದು ಎಂದು ಸ್ಪಷ್ಟನೆ ನೀಡಿದರು.

ಪ್ರತೀ 15 ದಿನಗಳಿಗೊಮ್ಮೆ ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಧಿಕಾರಿಗಳ ಸಭೆ ನಡೆಸಲಾಗುತ್ತಿದೆ. ಶೀಘ್ರವಾಗಿ (3ನೇ ಪುಟಕ್ಕೆ)

## ಪರಿಶಿಷ್ಟರ ಸೌಲಭ್ಯಕ್ಕೆ ನಕಲಿ ಪ್ರಮಾಣ ಪತ್ರದ ಬಗ್ಗೆ ವರದಿ

ಬೆಳಗಾವಿ, ಡಿ. 6 – ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ನಕಲಿ ಪ್ರಮಾಣ ಪತ್ರಗಳನ್ನು ಪಡೆದು ಈ ಸಮುದಾಯಕ್ಕೆ ಸೇರಬೇಕಾದ ಹಕ್ಕುಗಳನ್ನು ಕಸಿಯಲಾಗುತ್ತಿದೆ ಎಂದು ವಿಧಾನಸಭೆಯಲ್ಲಿ ವರದಿಯೊಂದನ್ನು ಮಂಡಿಸಲಾಗಿದೆ.

ರಾಜ್ಯದ ಕೆಲ ಭಾಗಗಳಲ್ಲಿ ಕಂದಾಯ ಅಧಿಕಾರಿಗಳು ಸರಿಯಾಗಿ ಪರಿಶೀಲನೆ ನಡೆಸದೇ ಜಾತಿ ಪ್ರಮಾಣ ಪತ್ರ ನೀಡುತ್ತಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕಲ್ಯಾಣ ಸಮಿತಿಯು ತನ್ನ ಮೊದಲ ಹಾಗೂ ಮಧ್ಯಂತರ ವರದಿಯನ್ನು ನೀಡಿದ್ದು, ಇದನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ.

ಬ್ರಾಹ್ಮಣರು, ವೀರಶೈವ ಲಿಂಗಾಯತ ಹಾಗೂ ಕುರುಬರು ಸೇರಿದಂತೆ 12 ಸಮುದಾಯಗಳಿಗೆ ಸೇರಿದ ಹಲವರು ಜಾತಿ ಪ್ರಮಾಣ ಪತ್ರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮೇಲ್ಜಾತಿಯ ಒಳಪಂಗಡಗಳ ಹೆಸರುಗಳು ಪರಿಶಿಷ್ಟರ ಜಾತಿಗಳ (2ನೇ ಪುಟಕ್ಕೆ)

## ‘ಆತ್ಮ’ ಅನಾದಿ ಹಾಗೂ ಅವಿನಾಶಿ

### ಋಣ ಸಂಬಂಧವಿದ್ದೆಡೆ ಆತ್ಮ ಪ್ರವೇಶ: ಡಾ.ಬಸವರಾಜ ರಾಜಋಷಿ

ದಾವಣಗೆರೆ, ಡಿ. 6- ಆತ್ಮ ಸ್ಥೂಲವಾದದ್ದೂ ಅಲ್ಲ, ಪಂಚಭೂತಗಳಿಂದ ಮಾಡಿದ್ದೂ ಅಲ್ಲ. ಅದು ಸಚೇತನ ಶಕ್ತಿ. ಅನಾದಿ ಹಾಗೂ ಅವಿನಾಶಿಯಾದದ್ದು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸ್ಥಳೀಯ ವಿದ್ಯಾನಗರ ಶಾಖಾ ಕೇಂದ್ರದ ಆವರಣದಲ್ಲಿ ನಡೆಯುತ್ತಿರುವ ಒಂದು ತಿಂಗಳ ಕಾಲದ ‘ಶರಣರು ಕಂಡ ಶಿವ’ ಪ್ರವಚನ ಮಾಲೆಯ ಮೂರನೇ ದಿನವಾದ ಬುಧವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಆತ್ಮ ಮನುಷ್ಯನ ಹೃದಯದಲ್ಲಿರುವುದಿಲ್ಲ. ಅದು ಭ್ರುಕುಟಿಗಳ ಮಧ್ಯೆ ಇರುವ ಮೆದುಳಿನಲ್ಲಿರುತ್ತದೆ. ಒಂದೇ ಕಡೆ ಇರುವ ಸೂರ್ಯ ಜಗತ್ತಿಗೆಲ್ಲಾ ಬೆಳಕು, ಶಕ್ತಿಯನ್ನು ಕೊಡುವಂತೆ ಶರೀರದಲ್ಲಿ ಭ್ರುಕುಟಿಗಳ ಮಧ್ಯೆ ಹಣೆಯಲ್ಲಿ ಆತ್ಮ ವಿರಾಜಮಾನವಾಗಿದ್ದಾನೆ ಎಂದು ಅರ್ಥೈಸಿಕೊಳ್ಳಬೇಕು ಎಂದು ಹೇಳಿದರು.

ಹಳೆಯ ಬಟ್ಟೆಯನ್ನು ಬಿಟ್ಟು ಹೊಸದನ್ನು ಬದಲಿಸುವಂತೆ ಶರೀರವು ವೃದ್ಧಾವಸ್ಥೆಗೆ ಬಂದಾಗ ಆತ್ಮ ಶರೀರವನ್ನು ಬಿಡುತ್ತದೆ. ಶಿಶುವಾಗಿ ಮತ್ತೆ ಜನ್ಮ ಪಡೆಯುತ್ತದೆ ಎಂದು ಹೇಳಿದರು.

ಆತ್ಮ ಜನ್ಮ ಪಡೆಯಲು (2ನೇ ಪುಟಕ್ಕೆ)

### ಆತ್ಮ-ಪರಮಾತ್ಮ ಬೇರೆ ಬೇರೆ

ಆತ್ಮನೇ ಬೇರೆ, ಪರಮಾತ್ಮನೇ ಬೇರೆ. ಆತ್ಮ ಮತ್ತೊಂದು ಶಕ್ತಿಯಲ್ಲಿ ಲೀನವಾಗುವುದಿಲ್ಲ ಎಂದು ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಪ್ರತಿಪಾದಿಸಿದರು.

ನಾವು ಮೃತಪಟ್ಟ ಮೇಲೆ ಶಿವೈಕ್ಯರಾಗುತ್ತೇವೆ. ಲಿಂಗೈಕ್ಯರಾಗುತ್ತೇವೆ. ಕೈಲಾಸ ವಾಸಿಗಳಾಗುತ್ತೇವೆ ಅಥವಾ ಶಿವಾಧೀನರಾಗುತ್ತೇವೆ. ನಾವೆಲ್ಲಾ ಶಿವನ ಅಂಶ. ಸಾವಿನ ನಂತರ ಶಿವನಲ್ಲಿ ಲೀನವಾಗುತ್ತೇವೆ ಎಂದು ಕೆಲವರು ಹೇಳುತ್ತಾರೆ.

ಅಲ್ಲದೇ, ‘ಶಿವಾಂಶ ಸಂಭೂತರು’ ಎಂಬ ಶಬ್ದವೂ ಬಳಕೆಯಲ್ಲಿದೆ. ಆದರೆ ವೈಜ್ಞಾನಿಕ ಆಧಾರದಿಂದ ಅರ್ಥೈಸಿಕೊಂಡಾಗ ಆತ್ಮ ಸ್ವತಂತ್ರವಾದದ್ದು. ನಾವೆಲ್ಲಾ ಆತ್ಮರು, ಪರಮಾತ್ಮನ ಅಂಶವಲ್ಲ ಎಂಬುದು ಸ್ಪಷ್ಟ. ಆತ್ಮ ಹಾಗೂ ಪರಮಾತ್ಮ ಎರಡೂ ಬೇರೇ ಬೇರೆ ಎಂದು ಹೇಳಿದರು.

ಪರಮಾತ್ಮನಲ್ಲಿ ಲೀನವಾಗುವುದೇ ಆದರೆ ಮಹಾತ್ಮರ ಸಮಾಧಿಗಳನ್ನೇಕೆ ಕಟ್ಟುತ್ತೇವೆ? ಉಕ್ಕಡಗಾತ್ರಿಯಲ್ಲಿ ಕರಿಬಸಜ್ಜಯ್ಯನ ಗದ್ದುಗೆ ಇದೆ. ಮಲೆ ಮಹದೇಶ್ವರರ ಗದ್ದುಗೆ, ಎಡೆಯೂರು ಸಿದ್ಧಲಿಂಗೇಶ್ವರರ ಗದ್ದುಗೆ, ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ ಗದ್ದುಗೆ ಇದೆ. ಜನರು ಅಲ್ಲಿ ಹೋಗಿ ಪ್ರಾರ್ಥನೆ ಸಲ್ಲಿಸಿ, ಆಶೀರ್ವಾದ ಪಡೆಯುತ್ತಾರೆ. ಅದರರ್ಥ ಅಲ್ಲಿ ಅವರ ಆತ್ಮವಿದೆ, ಅವರು ಶಿವ ಸ್ವರೂಪಿಗಳಂತಿದ್ದಾರೆ ಎಂದು. ಅಲ್ಲದೇ, ಆತ್ಮ ಮತ್ತೊಂದು ಶಕ್ತಿಯಲ್ಲಿ ಲೀನವಾಗುವುದಿಲ್ಲ ಎಂಬುದಕ್ಕೆ ಇದು ಪ್ರತ್ಯಕ್ಷ ಸಾಕ್ಷಿ ಎಂದು ಹೇಳಿದರು.

## ರಾಜಕೀಯ ತಿರುವು ಪಡೆದ ಹರಿಹರ ದರ್ಗಾ ರಸ್ತೆ ಕಾಮಗಾರಿ



ಹರಿಹರ, ಡಿ,6- ನಗರದ ತುಂಗಭದ್ರಾ ನದಿಯ ಹತ್ತಿರದ ದರ್ಗಾ ಮುಂಭಾಗದ ಬೀರೂರು ಸಮ್ಮಸಗಿ ರಸ್ತೆ ದುರಸ್ತಿಪಡಿಸಲು, ಇಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಕಾಮಗಾರಿ ಆರಂಭಿಸಲು ಮುಂದಾಗಿದ್ದ ವೇಳೆ, ಒಂದು ಗುಂಪು ಕಾಮಗಾರಿ ಆರಂಭ ಮಾಡಿ ಎಂದು ಹೋರಾಟ ಮಾಡಿದರೆ ಇನ್ನೊಂದು ಗುಂಪು ಕಾಮಗಾರಿ ನಿಲ್ಲಿಸುವಂತೆ ತಡೆಯಲು ಮುಂದಾಗಿದ್ದರಿಂದ ಎರಡು ಗುಂಪುಗಳ ನಡುವೆ ನಡೆದ ಮಾತಿನ ಚಕಮಕಿಯಿಂದಾಗಿ ಕಾಮಗಾರಿ ರಾಜಕೀಯ ತಿರುವನ್ನು ಪಡೆದುಕೊಂಡ ಘಟನೆ ನಡೆಯಿತು.

ಈ ರಸ್ತೆ ಸಂಪೂರ್ಣ ಹಾಳಾಗಿದ್ದು, ದುರಸ್ತಿ ಪಡಿಸುವಂತೆ ಆಗ್ರಹಿಸಿ ಕಳೆದ ಹತ್ತು ದಿನಗಳಿಂದ ಜಯ ಕರ್ನಾಟಕ ಸಂಘಟನೆಯ ನೇತೃತ್ವದಲ್ಲಿ ವಿವಿಧ ರೀತಿಯ ಹೋರಾಟ ನಡೆದುಕೊಂಡು ಬಂದಿದ್ದರಿಂದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ನಿನ್ನೆ ರಸ್ತೆಯನ್ನು ಸರ್ವೆ ಮಾಡಿ ಇಂದು ಬೆಳಿಗ್ಗೆ ಜೆಸಿಬಿ ಯಂತ್ರದ ಮೂಲಕ ಕಾಮಗಾರಿ ಆರಂಭಿಸಿದರು.

ಆರಂಭ ಮಾಡಿ ಸ್ವಲ್ಪ ಸಮಯದ ನಂತರ ಕಾಮಗಾರಿ ಸ್ಥಗಿತಗೊಳಿಸಲಾಯಿತು. ಜಯ ಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ ಸೇರಿದಂತೆ, ಹಲವು ಸಂಘಟನೆಗಳ ಯುವಕರು ಸ್ಥಳಕ್ಕೆ ಆಗಮಿಸಿ ಕಾಮಗಾರಿ ನಿಲ್ಲಿಸಲು ಕಾರಣ ಏನು ಎಂಬುದನ್ನು ತಿಳಿಸಬೇಕು ಎಂದು ಅಧಿಕಾರಿಗಳ ಬಳಿ ಪಟ್ಟು ಹಿಡಿದು, ರಸ್ತೆಯನ್ನು ಬಂದ್ ಮಾಡಿ ರಸ್ತೆಯಲ್ಲಿ ಶಾಮಿಯಾನ ಹಾಕಿ ಪ್ರತಿಭಟನೆ ಮಾಡಲು ಮುಂದಾದರು. ಆಗ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ಪೊಲೀಸರು ಪರ್ಯಾಯ ವ್ಯವಸ್ಥೆ ಮಾಡುವ ಮೂಲಕ ಸುಗಮ ಸಂಚಾರಕ್ಕೆ ದಾರಿ ಮಾಡಿಕೊಟ್ಟರು.

ಈ ವೇಳೆ ಆಗಮಿಸಿದ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಕೆ.ಎನ್. ಶಿವಮೂರ್ತಿ ಮಾತನಾಡಿ, ಶಾಸಕ ಬಿ.ಪಿ. (3ನೇ ಪುಟಕ್ಕೆ)

|| ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ || || ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಶಾಮನೂರು ವಾಸಿ, ರೈತ ಮುಖಂಡರಾದ
ಶ್ರೀಮತಿ, ಶ್ರೀ ಲಿಂಗರಾಜ್ ಹೆಚ್. ಆರ್. ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 30.11.2023ನೇ ಗುರುವಾರ ಬೆಳಗಿನ ಜಾವ 4.30ಕ್ಕೆ
ನನ್ನ ಪೂಜ್ಯ ತಂದೆಯವರಾದ



**ಹಳ್ಳಿಗೌಡ್ರು ಶ್ರೀ ರಾಮಚಂದ್ರಪ್ಪ ಎಸ್.ಜಿ.**

ಇವರು ಶಿವಾಧೀನರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ
‘ಕೈಲಾಸ ಶಿವಗಣಾರಾಧನೆಯನ್ನು’ ದಿನಾಂಕ : 08.12.2023ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಲಿಂಗೈಕ್ಯರ ಸ್ವಗೃಹ, 4ನೇ ಕ್ರಾಸ್, ನಾಗನೂರು ರಸ್ತೆ, ಶಾಮನೂರು ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ದುಃಖತಪ್ತ ಕುಟುಂಬ ವರ್ಗ**

- ಶ್ರೀಮತಿ ಕುಸುಮ, ಶ್ರೀ ಲಿಂಗರಾಜ್ ಹೆಚ್.ಆರ್.
- ಕು. ಪ್ರಿಯಾಂಕ ಹೆಚ್.ಎಲ್.
- ಶ್ರೀಮತಿ ಗೀತಾ ಹೆಚ್.ಆರ್. ಲಿಂ|| ಶ್ರೀ ಕೆ.ಆರ್. ಮಹೇಶ್ವರಪ್ಪ
- ಶ್ರೀಮತಿ ಆಶಾರಾಣಿ, ಶ್ರೀ ಎ.ಎಸ್.ಕಲ್ಲೇಶ್, ಚಿ. ಧ್ರುವ
- ಶ್ರೀಮತಿ ವಾಣಿ ಶ್ರೀ ಕಿರಣ್ ಕೆ.ಎಂ.

ಹಳ್ಳಿಗೌಡ್ರು ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.
ಮೊ : 98444 65560

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಮೊರಾರ್ಜಿ ಶಾಲಾ ಕಟ್ಟಡ ಕಾಮಗಾರಿ ಪರಿಶೀಲಿಸಿದ ಶಾಸಕ ಬಸವಂತಪ್ಪ



ದಾವಣಗೆರೆ, ಡಿ. 6 - ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ವಡೇರಹಳ್ಳಿ ಗ್ರಾಮದಲ್ಲಿ 17 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆ ನಿರ್ಮಾಣ ಕಾಮಗಾರಿಯನ್ನು ಶಾಸಕ ಕೆ.ಎಸ್. ಬಸವಂತಪ್ಪ ಅವರು ನಿನ್ನೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಲ್ಪಸಂಖ್ಯಾತರ ಇಲಾಖೆಯಡಿ ವಡೇರಹಳ್ಳಿ ಗ್ರಾಮದಲ್ಲಿ 14 ಎಕರೆ ಪ್ರದೇಶದ ಒಂದೇ ಕ್ಯಾಂಪಸ್‌ನಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ 8.50 ಕೋಟಿ ರೂ. ವೆಚ್ಚದಲ್ಲಿ ಬಾಲಕ-ಬಾಲಕಿಯರ ವಸತಿಯುತ ಶಾಲೆ ಮತ್ತು 8.50 ಕೋಟಿ ರೂ. ವೆಚ್ಚದಲ್ಲಿ ಬಾಲಕಿಯರ ವಸತಿಯುತ ಶಾಲೆ ನಿರ್ಮಾಣ ಮಾಡಲಾಗುತ್ತಿದೆ.

ಕಳಪೆ ಕಾಮಗಾರಿ ಆಗದಂತೆ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಎಚ್ಚರ ವಹಿಸಬೇಕು. ಒಂದು ವೇಳೆ ಸಾರ್ವಜನಿಕರಿಂದ ಕಳಪೆ ಕಾಮಗಾರಿ ಆಗಿದೆ ಎಂಬ ದೂರುಗಳು ಬಾರದ ರೀತಿ ಗುಣಮಟ್ಟದ ಶಾಶ್ವತ ಕಾಮಗಾರಿ ನಡೆಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಿಸಬೇಕೆಂದು ತಾಕೀತು ಮಾಡಿದರು.

ಮೊರಾರ್ಜಿ ವಸತಿಯುತ ಶಾಲೆಯ ಪಕ್ಕದಲ್ಲಿ ಹಳ್ಳ ಹರಿಯುತ್ತದೆ. ಧಾರಾಕಾರವಾಗಿ ಮಳೆ ಸುರಿದಾಗ ಹಳ್ಳ ತುಂಬಿ ಹರಿದು ಈ ಪ್ರದೇಶ ಜಲಾವೃತಗೊಳ್ಳುತ್ತದೆ. ಹೀಗಾಗಿ ಇಲ್ಲಿ ತಡೆಗೋಡೆ ನಿರ್ಮಿಸಿ ಶಾಲೆಯ ಆವರಣದಲ್ಲಿ ನೀರು ನುಗ್ಗದಂತೆ ಕ್ರಮ ವಹಿಸಬೇಕೆಂದು ಇದೇ ಸಂದರ್ಭದಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿಗಳು ಎಂಜಿನಿಯರ್, ಕಾರ್ಯಕರ್ತರು, ಗ್ರಾಮಸ್ಥರು ಇದ್ದರು.

## ಕಾನೂನನ್ನು ರಕ್ಷಣೆಗಾಗಿ ಬಳಸಬೇಕೇ ಹೊರತು, ಅಸ್ತ್ರವಾಗಿ ಅಲ್ಲ

### ಜಿಗಳಿ : ಎನ್ನೆಸ್ಸೆಸ್ ಶಿಬಿರದಲ್ಲಿ ನ್ಯಾಯಾಧೀಶರಾದ ಮಹದೇವ ಕಾನಟ್ಟಿ



ಮಲೇಬೆನ್ನೂರು, ಡಿ.6- ಕಾನೂನನ್ನು ರಕ್ಷಣೆಗಾಗಿ ಬಳಸಬೇಕೇ ಹೊರತು ಅಸ್ತ್ರವಾಗಿ ಬಳಸಬಾರದು ಎಂದು ಹರಿಹರದ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಮಹದೇವ ಕಾನಟ್ಟಿ ಹೇಳಿದರು.

ಅವರು, ಬುಧವಾರ ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿರುವ ಎನ್ನೆಸ್ಸೆಸ್ ಶಿಬಿರದ 5ನೇ ದಿನದ ಸಂಜೆ ಕಾರ್ಯಕ್ರಮವನ್ನು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಡಾ. ಅಂಬೇಡ್ಕರ್ ಅವರು ನೀಡಿದ ಸಂವಿಧಾನದಲ್ಲಿ ನೂರಾರು ಕಾನೂನುಗಳು ಜಾರಿಯಲ್ಲಿರುವುದರಿಂದ ದೇಶದಲ್ಲಿ ಸಮಾನತೆ, ಶಾಂತಿ ನೆಲೆಸಿದೆ. ಹಣ ಇಲ್ಲದವರೂ ಕಾನೂನು ನೆರವು ಬೇಕಾದಲ್ಲಿ ಕಾನೂನು ಸೇವಾ ಪ್ರಾಧಿಕಾರವನ್ನು ಸಂಪರ್ಕಿಸಿದರೆ, ನಿಮಗೆ ಉಚಿತವಾಗಿ ಕಾನೂನಿನ ನೆರವು ಸಿಗುತ್ತದೆ.

ಇದೇ ದಿನಾಂಕ 9ರ ಶನಿವಾರ ಲೋಕ ಅದಾಲತ್ ಇದ್ದು, ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಲಿದ್ದೇವೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಿ ಎಂದು ನ್ಯಾಯಾಧೀಶರಾದ ಮಹದೇವ ಕಾನಟ್ಟಿ ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಪಿ.ರುದ್ರಗೌಡ ಮಾತನಾಡಿ, ಮಕ್ಕಳು ಮಾನಸಿಕ ವಿಚಲಿತರಾದಾಗ ಪೋಷಕರು ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡರೆ, ಮುಂದಿನ ತೊಂದರೆಗಳನ್ನು ತಪ್ಪಿಸಬಹುದೆಂದು ಪೋಕ್ಸೋ ಕಾಯ್ದೆ ಬಗ್ಗೆ ತಿಳಿಸಿದರು.

ಹೊನ್ನಾಳಿ ಹಿರೇಕಲ್ಮಠ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಿ.ರಾಮಚಂದ್ರಪ್ಪ, ಗ್ರಾಮದ ಮುಖಂಡ ಕೆ. ಎಸ್.ನಂದ್ಯೆಪ್ಪ, ವಕೀಲ ಜಿ.ಟಿ.ಗೋವಿಂದರಾಜ್ ಮಾತನಾಡಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ದೇವೇಂದ್ರಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಕಾಲೇಜಿನ ಪ್ರಾಚಾರ್ಯ ಪ್ರೊ. ಹೆಚ್. ವಿರೂಪಾಕ್ಷಪ್ಪ, ವಕೀಲರಾದ ಜಿ.ಎನ್.ಮಾಲತೇಶ್, ಟಿ.ದೇವರಾಜ್, ಜಿ.ಎಂ.ಅಮೃತ, ಜಿ.ಎಂ. ಬಸವನಗೌಡ, ಬಸವರಾಜ್ ಪಾಟೀಲ್, ಹರಿಹರ ಎಸ್‌ಜೆವಿಪಿ ಕಾಲೇಜಿನ ಉಪನ್ಯಾಸಕ ಕೆ.ಎನ್. ಮಂಜುನಾಥ್, ದಾವಣಗೆರೆಯ ಆದರ್ಶ ಶಾಲೆಯ ಶಿಕ್ಷಕ ಎ.ಕೆ.ರಮೇಶ್, ಕೆ.ಎನ್.ಹಳ್ಳಿ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ದೊಡ್ಮನಿ ನಾಗರಾಜ್, ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ವಿ.ನಾಗರಾಜ್, ಗ್ರಾಮದ ನಾಗಸನಹಳ್ಳಿ ಮಹೇಶ್ವರಪ್ಪ, ಬಿ. ಸೋಮಶೇಖರಾಚಾರಿ, ಬೆಣ್ಣೇರ ನಂದ್ಯೆಪ್ಪ, ಎಂ.ಪಿ. ಜಯ್ಯಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಬಾಲಕೇಂದ್ರದ ಅಧ್ಯಕ್ಷ ಜಿ.ಆರ್.ಚಂದ್ರಪ್ಪ, ವಿಜಯಭಾಸ್ಕರ್, ಡಿ.ಪಿ.ಚಿದಾನಂದ್, ತೆಲಗಿ ನಾಗರಾಜ್, ಶಿಬಿರದ ಕಾರ್ಯಕ್ರಮಾಧಿಕಾರಿಗಳಾದ ಡಾ. ಬಿ.ಕೆ.ಮಂಜುನಾಥ್, ಡಾ.ಸಿ.ಚಂದ್ರಶೇಖರ್, 'ಜನತಾವಾಣಿ' ಹಿರಿಯ ವರದಿಗಾರ ಜಿಗಳಿ ಪ್ರಕಾಶ್ ಮತ್ತು ಇತರರು ಭಾಗವಹಿಸಿದ್ದರು.

## ರಾಜ್ಯ ಮಟ್ಟದ 'ಅಭಿರುಚಿ ಮಾಧ್ಯಮ ರತ್ನ' ಪ್ರಶಸ್ತಿ ಪುರಸ್ಕೃತರು

ದಾವಣಗೆರೆ, ಡಿ.6- ಮೈಸೂರಿನಲ್ಲಿ ಅಭಿರುಚಿ ಬಳಗದ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹರಿಹರದ ಚಿಂತನ ಪ್ರತಿಷ್ಠಾನದ ಅಧ್ಯಕ್ಷ



ಸುಬ್ರಹ್ಮಣ್ಯ ನಾಡಿಗೇರ್ ಮತ್ತು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ದಾವಣಗೆರೆ ಜಿಲ್ಲಾಧ್ಯಕ್ಷ ಡಾ.ಫ್ರಾನ್ಸಿಸ್ ಅವರಿಗೆ ರಾಜ್ಯ ಮಟ್ಟದ ಅಭಿರುಚಿ ಮಾಧ್ಯಮ ರತ್ನ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಯಿತು.

ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ಮೇಲುಕೋಟೆ ವೆಂಗಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ವಹಿಸಿದ್ದರು. ಅಭಿರುಚಿ ಸಂಸ್ಥೆಯ ಸಂಸ್ಥಾಪಕ ಎನ್.ವಿ.ರಮೇಶ್, ಅಭಿರುಚಿ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಉಮಾ ರಮೇಶ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಶ್ರೀಮತಿ ಸುಮತಿ ಸುಬ್ರಹ್ಮಣ್ಯ ವಹಿಸಿದ್ದರು.

## ನಕಲಿ ಪ್ರಮಾಣ ಪತ್ರದ ಬಗ್ಗೆ ವರದಿ

**(1ನೇ ಪುಟದಿಂದ)** ಹೆಸರಿಗೆ ಹೋಲಿಕೆಯಾಗುವಂತೆ ಇರುವುದನ್ನು ದುರ್ಬಳಕೆ ಮಾಡಲಾಗುತ್ತಿದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ನಕಲಿ ಜಾತಿ ಪ್ರಮಾಣ ಪತ್ರ ಪಡೆದವರ ವಿರುದ್ಧ ಈ ಹಿಂದೆ ಪ್ರಕರಣ ದಾಖಲಿಸಲಾಗುತ್ತಿತ್ತು. ಈಗ ನಕಲಿ ಪ್ರಮಾಣ ಪತ್ರ ನೀಡಿದವರ ವಿರುದ್ಧವೂ ಎಫ್.ಐ.ಆರ್. ದಾಖಲಿಸಲಾಗುತ್ತಿದೆ. ಇದುವರೆಗೂ 175 ತಹಶೀಲ್ದಾರರ ವಿರುದ್ಧ ನಕಲಿ ಜಾತಿ ಪ್ರಮಾಣ ಪತ್ರದ ಪ್ರಕರಣ ದಾಖಲಿಸಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

## 'ಆತ್ಮ' ಅನಾದಿ ಹಾಗೂ ಅವಿನಾಶಿ



**(1ನೇ ಪುಟದಿಂದ)** ಮುಖ್ಯ ಕಾರಣ ಋಣ ಸಂಬಂಧ. ಅದನ್ನಿಟ್ಟುಕೊಂಡೇ ಆತ್ಮವು ಶರೀರ ಪಡೆಯುತ್ತದೆ. ಅಲ್ಲಿಂದ ಜೀವನ ಸಾಗಲಾರಂಭಿಸುತ್ತದೆ. ಶರೀರದ ಒಳಗಿನ ಆತ್ಮಕ್ಕೆ ಅನುಭಾವಗಳು ಪ್ರಾಪ್ತಿಯಾಗುತ್ತವೆ. ವರ್ತಮಾನ ಜಗತ್ತಿನಲ್ಲಿ ಆತ್ಮವು ಯಾವ ಸಂಬಂಧ? ಯಾವ ಜ್ಞಾನ ಪಡೆಯಬೇಕೋ ಅದನ್ನು ಆಯಾ ಸಮಯದಲ್ಲಿ ಪಡೆಯುತ್ತದೆ ಎಂದು ವಿವರಿಸಿದರು.

ಎಲ್ಲಿ ಋಣ ಸಂಬಂಧವಿರುತ್ತದೋ ಅಲ್ಲಿ ಆತ್ಮನ ಪ್ರವೇಶವಾಗುತ್ತದೆ.ಋಣ ಸಂಬಂಧವನ್ನು ಮುಕ್ತಾಯ ಮಾಡಲು ಮತ್ತೆ ಭೂಮಿಗೆ ಬರಲೇಬೇಕಾಗುತ್ತದೆ. ತಾಯಿಯ ಗರ್ಭದಲ್ಲಿ ಶಿಶುವಿನ ಮೆದುಳಿನ ಅಭಿವೃದ್ಧಿ ಕಾರ್ಯ ನಡೆಯುತ್ತಿರುವ ವೇಳೆ ಅಂದರೆ, ಮೂರೂವರೆ ನಾಲ್ಕು ತಿಂಗಳ ಅವಧಿಯ ಸಮಯದಲ್ಲಿ ತಾಯಿ ಗರ್ಭದಲ್ಲಿ ಆತ್ಮ ಪ್ರವೇಶವಾಗುತ್ತದೆ. ಆಗ ಶಿಶುವಿನ ಚಲನವಲನ ಆರಂಭವಾಗುತ್ತದೆ ಎಂದು ಹೇಳಿದರು.

ಈಶ್ವರೀಯ ವಿಶ್ವವಿದ್ಯಾಲಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ ವೀಕ್ಷಿಸಿ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

### 'ಆತ್ಮ' ಹೊಸ ತಾಯಿ ಗರ್ಭ ಪ್ರವೇಶಕ್ಕೆ ಮೊದಲೇ ಭೋಗ-ಭಾಗ್ಯಗಳು ನಿರ್ಣಯಿಸಲ್ಪಡುತ್ತವೆ

ಪ್ರಾರಬ್ಧ ಕರ್ಮ, ಸಂಚಿತ ಕರ್ಮ, ಅಗಾಮಿ ಕರ್ಮ ಹಾಗೂ ಭೂಮ್‌ರಾಗ್ ಕರ್ಮ ಎಂಬ ನಾಲ್ಕು ಬಗೆಯ ಕರ್ಮಗಳು ನಮ್ಮನ್ನು ಕಾಡುತ್ತವೆ. ಹಿಂದಿನ ಹಲವು ಜನ್ಮಗಳಲ್ಲಿ ಮಾಡಿದ ಪಾಪ ಪುಣ್ಯಗಳ ಮೊತ್ತ ಪ್ರಾರಬ್ಧ ಕರ್ಮ. ಕಳೆದ ಜನ್ಮದಲ್ಲಿ ಮಾಡಿದ ಪಾಪ ಪುಣ್ಯ ಸಂಚಿತ ಕರ್ಮ, ಈ ಜನ್ಮದಲ್ಲಿ ಮಾಡಿದ ಪಾಪ ಪುಣ್ಯವನ್ನು ಇಲ್ಲಿಯೇ ಅನುಭವಿಸಬೇಕಾದದ್ದು ಭೂಮ್ ರಾಗ್ ಕರ್ಮ ಹಾಗೂ ಈ ಜನ್ಮದಲ್ಲಿ ಮಾಡಿದ ಪಾಪ ಪುಣ್ಯವನ್ನು ಮುಂದಿನ ಜನ್ಮದಲ್ಲಿ ಅನುಭವಿಸಲೇ ಬೇಕಾಗಿರುವುದು ಅಗಾಮಿ ಕರ್ಮ. ಇವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ವಿಶ್ಲೇಷಿಸಿದರು.

ಆತ್ಮ ಗರ್ಭಕ್ಕೆ ಹೋಗುವ ಮೊದಲು ಎಲ್ಲಿ ಜನಿಸಬೇಕು. ಕರ್ಮ ಫಲಗಳೇನು ಎಂಬುದನ್ನು ಪರಮಾತ್ಮ ಮೊದಲೇ ನಿರ್ಣಯಿಸಿರುತ್ತಾನೆ ಎಂದು ತಿಳಿಸಿದರು.

### ಸಸ್ಯಗಳಲ್ಲಿ ಆತ್ಮ ಇರುವುದಿಲ್ಲ

ಸಸ್ಯಗಳು ಸಜೀವ ಕೋಶಗಳಿಂದ ನಿರ್ಮಾಣವಾಗಿರುವುದು ಸತ್ಯ. ಆದರೆ ಸಸ್ಯಗಳಲ್ಲಿ ಆತ್ಮ ಇರುವುದಿಲ್ಲ. ಸಸ್ಯಗಳಿಗೆ ಸ್ಪಂದನೆಗಳಿವೆ. ಸಸ್ಯಕ್ಕೆ ಬೆಳಕು ಸಿಗದಿದ್ದರೆ ಅದು ಬೆಳಕು ಇರುವ ಕಡೆ ವಾಲುತ್ತದೆ. ನೀರು ಸಿಗುವ ಕಡೆ ಬೇರು ಹೋಗುತ್ತದೆ.

ಯಾವ ಪ್ರಾಣಿಗಳಲ್ಲಿ ಮೆದುಳಿದೆಯೋ ಅಲ್ಲಿ ಆತ್ಮದ ಪ್ರವೇಶವಾಗುತ್ತದೆ. ಮೆದುಳೇ ಇಲ್ಲದಿದ್ದಾಗ ಆತ್ಮಕ್ಕೆ ಕೆಲಸ ಮಾಡಲು ಆಗುವುದಿಲ್ಲ. ಎಲ್ಲಾ ಪ್ರಾಣಿಗಳಲ್ಲೂ ಮೆದುಳಿದೆ. ಆಯಾ ಪ್ರಾಣಿಗಳು ಆಯಾ ಮೆದುಳಿನ ಮೂಲಕ ತನ್ನ ಸಂಸ್ಕಾರ ಪ್ರಟಿಸುತ್ತವೆ. ಕ್ರಿಯೆಗಳನ್ನು ಮಾಡುತ್ತವೆ. ಹಾಗೆಯೇ ಮನುಷ್ಯನ ಶರೀರದಲ್ಲೂ ಮೆದುಳಿರುವುದರಿಂದ ಆತ್ಮ ವಾಸ ಮಾಡುತ್ತದೆ. ಈ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.

## ಸನ್ಮಾನಕ್ಕೆ ಮಾಜಿ ಸೈನಿಕರಿಂದ ಅರ್ಜಿ

ದಾವಣಗೆರೆ, ಡಿ.6- ಶಿವಮೊಗ್ಗದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಇದೇ ದಿನಾಂಕ 16 ರಂದು ನಡೆಯಲಿರುವ 'ವಿಜಯ ದಿವಸ'ದ ಅಂಗವಾಗಿ 1971ರ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಾಜಿ ಸೈನಿಕರಿಂದ ಸನ್ಮಾನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಾಜಿ ಸೈನಿಕರು ತಮ್ಮ ಮಾಜಿ ಸೈನಿಕ ಗುರುತಿನ ಚೀಟಿ ಮತ್ತು ಪೂರ್ವ ಅಥವಾ ಪಶ್ಚಿಮ ಮೆಡಲ್‌ಗಳನ್ನು ಹೊಂದಿರುವ ಸ್ವವಿವರಗಳನ್ನೊಳಗೊಂಡ ಮಾಹಿತಿಯನ್ನು soldiersshimoga@gmail.com ಅಥವಾ ದೂ.08182-220925ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಶಿವಮೊಗ್ಗ ದೂ.08182-220925ಗೆ ಸಂಪರ್ಕಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಪ್ರಭಾರ ಉಪ ನಿರ್ದೇಶಕ ಡಾ. ಸಿ.ಎ ಹಿರೇಮಠ್ ತಿಳಿಸಿದ್ದಾರೆ.

## ಸಿದ್ಧಗಂಗಾ ಸ್ಕೌಟ್ಸ್ ಗೈಡ್ಸ್‌ನಿಂದ ಯೋಧ ಪ್ರಾಂಜಲ್‌ಗೆ ಶ್ರದ್ಧಾಂಜಲಿ



ದಾವಣಗೆರೆ, ಡಿ. 6 - ಇತ್ತೀಚಿಗೆ ಹುತಾತ್ಮರಾದ ವೀರಯೋಧ ಪ್ರಾಂಜಲ್ ಅವರಿಗೆ ಸಿದ್ಧಗಂಗಾ ಸ್ಕೌಟ್ಸ್ ಗೈಡ್ಸ್ ವತಿಯಿಂದ ಮೇಣದ ಬತ್ತಿಗಳನ್ನು ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸ್ಕೌಟ್ಸ್ ಗೈಡ್ಸ್‌ನ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಎಂ. ಸಿ. ಮಹೇಶ್ ಪ್ರಾಂಜಲ್ ಪರಿಚಯ ಮಾಡುತ್ತಾ, ಅವರ ಅನನ್ಯ ದೇಶಪ್ರೇಮವನ್ನು ಕೊಂಡಾಡಿದರು. ರಾಷ್ಟ್ರಪತಿ ಪುರಸ್ಕೃತರಾಗಿದ್ದ ಪ್ರಾಂಜಲ್ ಅವರು ಎಲ್ಲ ಸ್ಕೌಟ್ಸ್-ಗೈಡ್ಸ್‌ನವರಿಗೆ ಮಾದರಿಯಾಗಿದ್ದಾರೆ ಎಂದರು.

ಆಗರ್ಭ ಶ್ರೀಮಂತ ಸುಶಿಕ್ಷಿತ ಕುಟುಂಬದ ಕಿರಿಯ ವಯಸ್ಸಿನಲ್ಲೇ ಹಿರಿಯ ಸಾಧನೆಗೈದು ತನ್ನ ಪ್ರಾಣವನ್ನು ತಾಯ್ನೆಲಕ್ಕೆ ಸಮರ್ಪಿಸಿದ ಪ್ರಾಂಜಲ್ ರವರು ಶ್ರೇಷ್ಠ ಸಂದೇಶ ನೀಡಿದ್ದಾರೆ ಎಂದು ಸ್ಕೌಟ್ಸ್ ಅಧ್ಯಕ್ಷೆ ಜಸ್ಪಿನ್ ಡಿಸೌಜ ಹೇಳಿದರು. ಎಲ್.ಟಿ. ಶಶಿಕಲಾ, ಗೈಡ್ಸ್ ಎಡಿಸಿ ರೇಖಾರಾಣಿ, ಸ್ಕೌಟ್ ಮಾಸ್ಟರ್ ಆರೋಗ್ಯಮ್ಮ, ಸುನೀತಾ ಮತ್ತಿತರರು ಮಕ್ಕಳೊಡನೆ ಭಾಗವಹಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

## ನಗರದಲ್ಲಿ ಇಂದು ಜ್ಯೂಡೋ ಪಟುಗಳ ಆಯ್ಕೆ ಪ್ರಕ್ರಿಯೆ

ದಾವಣಗೆರೆ ವಿಶ್ವವಿದ್ಯಾನಿಲಯ ಮಟ್ಟದ ಅಂತರಕಾಲೇಜು ಪುರುಷರ ಮತ್ತು ಮಹಿಳೆಯರ ಜ್ಯೂಡೋ ಸ್ಪರ್ಧೆ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯ ಜ್ಯೂಡೋ ಪಟುಗಳ ಆಯ್ಕೆ ಪ್ರಕ್ರಿಯೆಯ ಉದ್ಘಾಟನಾ ಸಮಾರಂಭವು ಬೆಳಿಗ್ಗೆ 10 ಗಂಟೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಜೆ.ಎಸ್. ವೀರೇಶ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪ್ರೊ. ಬಿ.ಸಿ. ದಾದಾಪೀರ್ ವಹಿಸುವರು. ಪ್ರೊ. ವೆಂಕಟೇಶ್, ಡಾ. ಬಿ.ಹೆಚ್. ವೀರಪ್ಪ, ಬಸವರಾಜ ಸಿ. ತಹಶೀಲ್ದಾರ್, ಡಾ. ಸಿ.ವಿ. ಲತಾ, ಸವಿತಾ ಬಿ. ಮೇಗಲಮನಿ, ಪ್ರೊ. ಎಸ್. ವೆಂಕಟೇಶ್ ಬಾಬು, ಪ್ರೊ. ಶಂಭುಲಿಂಗಪ್ಪ ನಲ್ಲನವರ್, ಪ್ರೊ. ಜಿ. ಮಂಜುನಾಥ್ ಅವರುಗಳ ಗೌರವ ಉಪಸ್ಥಿತಿಯಲ್ಲಿ ನಡೆಯುವುದು. ಶ್ರೀಮತಿ ಗೀತಾದೇವಿ ಉಪಸ್ಥಿತರಿರುವರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ಇವರುಗಳ ಆಶ್ರಯದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುವುದು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದು ಬೆಳಿಗ್ಗೆ 6 ರಿಂದ 7.30 ರವರೆಗೆ ಆಲೂರು ಕನ್‌ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಪುಷ್ಪ (9036719573) ಅರ್ಚನ (9738572311).

## ಅವ್ಯವಹಾರ : ಜೈಲು

**(1ನೇ ಪುಟದಿಂದ)** ಮತ್ತು ಅನುಸೂಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಮಸೂದೆ 2023 ಅನ್ನು ಸದನದಲ್ಲಿ ಮಂಡಿಸಲಾಗಿದೆ. ಯಾವುದೇ ಹುದ್ದೆಗಾಗಿ ನಡೆಸಲಾಗುವ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಸೋರಿಕೆ ಹಾಗೂ ಪರೀಕ್ಷಾ ಅವ್ಯವಹಾರಗಳ ತಡೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ಇತ್ತೀಚಿನ ದಿನಗಳಲ್ಲಿ ಪಿ.ಎಸ್.ಐ. ಪರೀಕ್ಷೆ ಸೇರಿದಂತೆ ಹಲವಾರು ಪರೀಕ್ಷೆಗಳಲ್ಲಿ ಅವ್ಯವಹಾರದ ವರದಿಗಳಾಗಿದ್ದವು.

## ಹದಡಿ : ಅಪರಿಚಿತ ಯುವಕನ ಸಾವು



ದಾವಣಗೆರೆ, ಡಿ.6- ತಾಲ್ಲೂಕಿನ ಹದಡಿ ಗ್ರಾಮದಲ್ಲಿ ಓಡಾಡಿಕೊಂಡಿದ್ದ 25 ವರ್ಷ ವಯಸ್ಸಿನ ಮುರುಳಿ ಎಂಬ ಅಪರಿಚಿತ ವ್ಯಕ್ತಿ ನಗರದ ಜಿಲ್ಲಾ ಚಿಗಟೇರಿ ಆಸ್ಪತ್ರೆಯಲ್ಲಿ ಕಳೆದ ನವೆಂಬರ್ 24 ರಂದು ಉಸಿರಾಟ ತೊಂದರೆಯಿಂದ ಮೃತಪಟ್ಟಿದ್ದಾನೆ. ಕೋಲು ಮುಖ, ತೆಳ್ಳನೆಯ ಮೈಕಟ್ಟು ಹಾಗೂ ಗೋಧಿ ಬಣ್ಣ ಹೊಂದಿದ್ದು, ಬಿಳಿ ಬಣ್ಣದ ಮತ್ತು ಸಿಮೆಂಟ್ ಬಣ್ಣಗಳ ದಪ್ಪಗೆರೆಗಳಿರುವ ಶರ್ಟ್ ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ. ಸಂಬಂಧಪಟ್ಟವರು ದೂರವಾಣಿ : 08192-218405 ಅಥವಾ 08192-253100ಗೆ ಸಂಪರ್ಕಿಸಬಹುದು.

## ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್‌ಗೆ ಚಾಂಪಿಯನ್‌ಶಿಪ್



ದಾವಣಗೆರೆ, ಡಿ.6- ಕರ್ನಾಟಕ ರಾಜ್ಯ ಬಾಸ್ಕೆಟ್ ಬಾಲ್ ಅಸೋಸಿಯೇಷನ್ ಹಾಗೂ ಬಳ್ಳಾರಿ ಜಿಲ್ಲಾ ಬಾಸ್ಕೆಟ್ ಬಾಲ್ ಅಸೋಸಿಯೇಷನ್ ಹಾಗೂ ವೈ.ಸಿ.ಬಿ.ಸಿ. ಕ್ಲಬ್ ಇವರ ಜಂಟಿ ಆಶ್ರಯದಲ್ಲಿ ಬಳ್ಳಾರಿಯಲ್ಲಿ ಇತ್ತೀಚಿಗೆ ನಡೆದ ಕರ್ನಾಟಕ ಬಾಸ್ಕೆಟ್ ಬಾಲ್ ಲೀಗ್ ವಿಭಾಗ ಮಟ್ಟದ ಪಂದ್ಯಾವಳಿಗಳಲ್ಲಿ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್ ಎಲ್ಲಾ ಪಂದ್ಯಗಳಲ್ಲೂ ಜಯ ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಮೊದಲ ಪಂದ್ಯ ವಿಜಯನಗರ ಎದುರು 61-42 ಅಂಕಗಳು, ಎರಡನೇ ಪಂದ್ಯ ಚಿತ್ರದುರ್ಗ ದುರ್ಗಸ್ ಕ್ಲಬ್ ಎದುರು 61-47 ಅಂಕಗಳು ಮತ್ತು ಲೀಗ್‌ನ ಕೊನೆಯ ಪಂದ್ಯ ಬಳ್ಳಾರಿ ತಂಡ ಎದುರು 67-51 ಅಂಕಗಳ ಪಡೆದಿದೆ.

ಅಲ್ಲದೇ ಜನವರಿಯಲ್ಲಿ ನಡೆಯುವ ಕರ್ನಾಟಕ ರಾಜ್ಯ ಬಾಸ್ಕೆಟ್ ಬಾಲ್ ಲೀಗ್ ಚಾಂಪಿಯನ್ ಶಿಪ್‌ಗೆ ಅರ್ಹತೆ ಪಡೆದಿದೆ ಎಂದು ಕ್ಲಬ್‌ನ ಕಾರ್ಯದರ್ಶಿ ಆರ್. ವೀರೇಶ್ ತಿಳಿಸಿದ್ದಾರೆ.

ಕ್ಲಬ್ ಗೌರವಾಧ್ಯಕ್ಷ ಸಿ.ಶ್ರೀರಾಮ್ ಮೂರ್ತಿ, ಅಧ್ಯಕ್ಷ ಆರ್. ಕಿರಣ್ ಕುಮಾರ್, ಉಪಾಧ್ಯಕ್ಷ ಹಾಗೂ 38ನೇ ವಾರ್ಡ್‌ನ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಕಾರ್ಯದರ್ಶಿ ಆರ್. ವೀರೇಶ್, ಖಜಾಂಚಿ ಪ್ರಸನ್ನ ಅವರುಗಳು ಎಲ್ಲಾ ಆಟಗಾರರನ್ನು ಅಭಿನಂದಿಸಿದ್ದಾರೆ.


## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ




॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ದಾವಣಗೆರೆ ಜಿ. ಚನ್ನಗಿರಿ ತಾ. ಸಿದ್ದನಮಠ ಗ್ರಾಮದ ವಾಸಿ **ಶ್ರೀ ನಾಗರಾಜಯ್ಯ ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ: 30.11.2023ನೇ ಗುರುವಾರ ಬೆಳಿಗ್ಗೆ 9 ಕ್ಕೆ ನಮ್ಮ ಪೂಜ್ಯ ತಂದೆಯವರಾದ **ಶ್ರೀ ಕಾಮನಹಳ್ಳಿ ವೀರಭದ್ರಯ್ಯನವರು ಕೆ.** ರಂಗಭೂಮಿ ಕಲಾವಿದರು ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆಯನ್ನು'** ದಿನಾಂಕ:08.12.2023ನೇ **ಶುಕ್ರವಾರ ಬೆಳಿಗ್ಗೆ 10.30ಕ್ಕೆ ಸಿದ್ದನಮಠ ಗ್ರಾಮದ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು** ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು : **ಶ್ರೀ ಕೆ.ವಿ. ನಾಗರಾಜಯ್ಯ ಮತ್ತು ಸಹೋದರರು, ಸಹೋದರಿಯರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಕಾಮನಹಳ್ಳಿ ವಂಶಸ್ಥರು ಹಾಗೂ ಬಂಧು ಮಿತ್ರರು.**

**ಮೊ : 74112 50186, 95910 51410**


## ಸಿಂಗಾಡಿ ಈರಪ್ಪ (ನಾಗೂರು) ನಿಧನ



ದಾವಣಗೆರೆ ಸಿಟಿ ಜಾಲಿ ನಗರದ ವಾಸಿ ಶ್ರೀ ಅನ್ನದಾನೇಶ್ವರ ಶಾಖಾ ಮಠದ ಸದಸ್ಯರಾದ ಸಿಂಗಾಡಿ ಈರಪ್ಪ (ನಾಗೂರು) (76) ಇವರು, ದಿನಾಂಕ 06.12.2023ರ ಬುಧವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.12.2023ರ ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


**ರಕ್ತ ದಾನ ಶ್ರೇಷ್ಠ ದಾನ**

## ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಡಿ.6- ಇದೇ ದಿನಾಂಕ 3 ರಂದು ನಗರದ ಖಾಸಗಿ ಬಸ್ ನಿಲ್ದಾಣದ ಮಳಿಗೆಯ ಮುಂದೆ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ.

ಮೃತನು ಸುಮಾರು 55 ವರ್ಷದವರಾಗಿದ್ದು, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ಒಂದು ಇಂಚು ಉದ್ದದ ತಲೆಗೂದಲು, ಕಪ್ಪುಬಿಳಿ ಮಿಶ್ರಿತ ದಾಡಿ ಹೊಂದಿರುತ್ತಾನೆ. ಮೃತನು ಮಾಸಲು ಬಿಳಿ ತುಂಬು ತೋಳಿನ ಶರ್ಟ್, ಬೂದು ಬಣ್ಣದ ಪ್ಯಾಂಟ್ ಮತ್ತು ನೇರಳೆ ಕಲರ್ ಅಂಡರ್‌ವೇರ್ ಧರಿಸಿರುತ್ತಾನೆ. ಸಂಬಂಧಪಟ್ಟವರು ಬಡಾವಣೆ ಪೊಲೀಸ್ ಠಾಣೆ ದೂರವಾಣಿ 08192-272012, ಡಿವೈಎಸ್‌ಪಿ ನಗರ ಕಛೇರಿ 08192-259213ಕ್ಕೆ ಸಂಪರ್ಕಿಸಬಹುದು.

## ಬರಗಾಲ : ಟ್ರ್ಯಾಕ್ಟರ್ ಮಾಲೀಕರ ಮೇಲೆ ಫೈನಾನ್ಷಿಯರ್ಸ್ ದೌರ್ಜನ್ಯ ಸರಿಯಲ್ಲ




ಹರಪನಹಳ್ಳಿ, ಡಿ.6- ಬರಗಾಲ ಹಿನ್ನೆಲೆಯಲ್ಲಿ ಫೈನಾನ್ಸ್ ಮಾಲೀಕರು ಟ್ರ್ಯಾಕ್ಟರ್ ಮಾಲೀಕರ ಮೇಲೆ ದೌರ್ಜನ್ಯ ನಡೆಸಿ ಟ್ರ್ಯಾಕ್ಟರ್ ಸೀಜ್ ಮಾಡುವ ಕ್ರಮ ಸರಿಯಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘದ ತಾಲ್ಲೂಕು ಅಧ್ಯಕ್ಷ (ಹುಚ್ಚನಹಳ್ಳಿ ಮಂಜುನಾಥ ಬಣ)ದ ದ್ಯಾಮಜ್ಜಿ ಹನುಮಂತಪ್ಪ ಒತ್ತಾಯಿಸಿದರು.

ತಹಶೀಲ್ದಾರರಿಗೆ ಮನವಿ ಸಲ್ಲಿಸಿ ನಂತರ ಮಾತನಾಡಿದ ಅವರು, ಫೈನಾನ್ಸ್ ಕಂಪನಿಗಳು ತಮ್ಮ ಪ್ರತಿನಿಧಿಗಳ ಮೂಲಕ ಕಂತುಗಳನ್ನು ಕಟ್ಟುವಂತೆ ಒತ್ತಡ ಹೇರುವುದನ್ನು ನಿಲ್ಲಿಸಬೇಕು. ರಾಜ್ಯದಲ್ಲಿ ಬರಗಾಲವಿದೆ, ಕಂತು ಕಟ್ಟುವ ಸಂಕಷ್ಟದಲ್ಲಿ ರೈತ ತೊಳಲಾಡುತ್ತಿದ್ದಾನೆ, ವ್ಯಾಪಾರ, ವಹಿವಾಟುಗಳಿಲ್ಲದೆ ಜನರು ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿಯೂ ಸಹ ಮಾನವೀಯತೆಯನ್ನು ಮರೆತು ಸಾಲ ಪಡೆದ ರೈತರುಗಳಿಗೆ ಕಂತುದಾರರಿಗೆ ಕಂತುಗಳನ್ನು ಕಟ್ಟುವಂತೆ ಪೀಡಿಸುತ್ತಿದ್ದಾರೆ. ಹಾಗಾಗಿ ಈ ರೀತಿ ಸಾಲಗಾರರಿಗೆ ಕಂತುಗಳನ್ನು ಕಟ್ಟುವಂತೆ ಒತ್ತಡ ಹೇರುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಫೈನಾನ್ಸ್ ಮಾಲೀಕರು ಎರಡು-ಮೂರು ಕಂತುಗಳನ್ನು ಕಟ್ಟದೇ ಇರುವ ಗಾಡಿಗಳನ್ನು ದೌರ್ಜನ್ಯದಿಂದ ಸೀಜ್ ಮಾಡುವುದನ್ನು ನಿಲ್ಲಿಸಬೇಕು. ಒಂದು ವೇಳೆ ಇದೇ ರೀತಿ ವಾಹನಗಳನ್ನು ಸೀಜ್ ಮಾಡುವುದಕ್ಕೆ ಮುಂದಾದರೆ ಕಾನೂನು ಉಲ್ಲಂಘನೆ ಮಾಡಿದಂತೆ ಆಗುತ್ತದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಲು ತಹಶೀಲ್ದಾರರು ಅಂತಹ ಕಂಪನಿಗಳ ಮೇಲೆ ಕ್ರಮ ಕೈಗೊಳ್ಳಲು ಮಧ್ಯಪ್ರವೇಶಕ್ಕೆ ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಕಾರ್ಯದರ್ಶಿ ಕಾಳಪ್ಪ ರಮೇಶ್, ಹುಲಿಕಟ್ಟಿ ಪಕ್ಕೀರಪ್ಪ, ಗುಂಡಗತ್ತಿ ಸೋಮಪ್ಪ, ತೌಡೂರು ಸಿದ್ದಪ್ಪ, ಬಾಲೇನಹಳ್ಳಿ ಜಗದಪ್ಪ ಸೇರಿದಂತೆ ಇತರೆ ರೈತ ಮುಖಂಡರು ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸಂವಿಧಾನ ಜಾರಿಯಿಂದ ಪ್ರತಿಯೊಬ್ಬರಿಗೂ ಸಮಾನತೆ ಸಿಕ್ಕಿದೆ



**ಜಗಳೂರು : ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ಕಾರ್ಯಕ್ರಮದಲ್ಲಿ ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ**

ಜಗಳೂರು, ಡಿ. 6 - ಸಂವಿಧಾನ ಜಾರಿಯಿಂದ ದೇಶದ ಪ್ರತಿಯೊಬ್ಬರಿಗೂ ಸಮಾನತೆಯ ಅಧಿಕಾರ ಸಿಕ್ಕಿದೆ. ಸಾಮಾನ್ಯ ಪ್ರಜೆಗೂ ಆಡಳಿತದ ಅಧಿಕಾರ ಲಭಿಸಲು ಹಾಗೂ ಪುರುಷ, ಮಹಿಳೆಯರಿಗೂ ಸೇರಿದಂತೆ ಪ್ರತಿಯೊಬ್ಬ ಪ್ರಜೆಗೂ ಮತದಾನದ ಹಕ್ಕು ಚಲಾಯಿಸಲು ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ದಲಿತ ಸಂಘರ್ಷ ಸಮಿತಿ ಹಾಗೂ ಪ್ರಗತಿ ಪರ ಸಂಘಟನೆ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನ ಪೂರ್ವದಲ್ಲಿ ಮತದಾನದ ಹಕ್ಕು ಕೇವಲ ಒಂದು ವರ್ಗಕ್ಕೆ ಸೀಮಿತವಾಗಿತ್ತು ಹಾಗೂ ರಾಜಮನೆತನದವರು ವಂಶ ಪರಂಪರೆಯಾಗಿ ಪರ್ಯಾಯವಾಗಿ ಆಡಳಿತದ ಅಧಿಕಾರ ಅನುಭವಿಸುತ್ತಿದ್ದರು. ಆದರೆ ಸಂವಿಧಾನ ಜಾರಿಗೆ ಬಂದ ನಂತರ ಸ್ಥಳೀಯ ಆಡಳಿತ ವಿಕೇಂದ್ರೀಕರಣದಲ್ಲಿ ಸಾವಿರಾರು ಜನ ಅಧಿಕಾರ ಅನುಭವಿಸಿದ್ದರೂ ಪ್ರಜಾಪ್ರಭುತ್ವಕ್ಕೆ ಕಾರಣವಾದ ಬಾಬಾ ಸಾಹೇಬರನ್ನು ಮಾತ್ರ ಯಾರೊಬ್ಬರೂ ಸ್ಮರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಮಹಿಳೆಯರು ಒಳಗೊಂಡಂತೆ ಶೋಷಿತ ವರ್ಗಕ್ಕೆ ವಿದ್ಯಾಭ್ಯಾಸಕ್ಕೆ ನಿರಾಕರಣೆಯಿದ್ದ ಸಂದರ್ಭದಲ್ಲಿ ಬಾಬಾಸಾಹೇಬರು ವಿದೇಶದಲ್ಲಿ ಅಭ್ಯಾಸ ಮಾಡಿ ದೇಶಕ್ಕೆ ಸಂವಿಧಾನ ರಚಿಸಿದ ಮಹಾನಾಯಕರಾಗಿದ್ದಾರೆ ಎಂದು ತಿಳಿಸಿದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ನಾನು ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿರುವುದು ಡಾ.ಬಿ. ಆರ್. ಅಂಬೇಡ್ಕರ್ ಅವರ ಸಂವಿಧಾನದ ಕೊಡುಗೆಯಿಂದ. ನನ್ನ ಆಡಳಿತಾವಧಿಯಲ್ಲಿ ಪಟ್ಟಣದ ಕೇಂದ್ರ ಸ್ಥಾನದಲ್ಲಿ ಪುತ್ಥಳಿ ನಿರ್ಮಿಸಿ ಋಣ ತೀರಿಸಿರುವೆ ಎಂದರು.

ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಭಿಕ್ಷೆಯಿಂದ ನಾವು ಬದುಕುತ್ತಿದ್ದೇವೆ, ಅವರ ಜೀವಿತಾವಧಿಯಲ್ಲಿ ಅಂದಿನ ಸಮಾಜದಲ್ಲಿ ಅನುಭವಿಸಿದ ಸಾಮಾಜಿಕ ಶೋಷಣೆ, ಅಸ್ಪೃಶ್ಯತೆ, ಉಪದ್ರವಗಳು, ಸಂಕಷ್ಟಗಳನ್ನು ನೈಜ ಜೀವನಾಧಾರಿತ ಧಾರಾವಾಹಿ ಮಹಾನಾಯಕದಲ್ಲಿ ಚಿತ್ರೀಕರಣಗೊಂಡಿದೆ. ಪ್ರತಿಯೊಬ್ಬರೂ ವೀಕ್ಷಿಸಿ ಮನಗಾಣಬೇಕಿದೆ ಎಂದರು.

ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್ ಮಾತನಾಡಿ, ಬಾಬಾಸಾಹೇಬರ ಜನ್ಮ, ವಿದ್ಯಾಭ್ಯಾಸ, ಬೌದ್ಧಧರ್ಮ ಸ್ವೀಕಾರ, ಐಕ್ಯ ಹಾಗೂ ಅಂತ್ಯ-ಸಂಸ್ಕಾರವಾದ ಸ್ಥಳಗಳು ಅವರ ಅನುಯಾಯಿಗಳಿಗೆ ಇಂದಿಗೂ ಪುಣ್ಯ ಭೂಮಿಗಳಾಗಿವೆ ಎಂದರು.

ಪೊಲೀಸ್ ನಿರೀಕ್ಷಕ ಶ್ರೀನಿವಾಸ್ ರಾವ್ ಮಾತನಾಡಿ, ಅಂಬೇಡ್ಕರ್ ಆಶಯದಂತೆ ಎಲ್ಲಾ ಸಮುದಾಯದವರು ಶಿಕ್ಷಣಕ್ಕೆ ಒತ್ತು ನೀಡಬೇಕಿದೆ ಶಿಕ್ಷಣದಿಂದ ಮಾತ್ರ ಸಮಾಜದ ಬದಲಾವಣೆ ಸಾಧ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಿ.ಎಸ್.ಎಸ್. ತಾಲ್ಲೂಕು ಅಧ್ಯಕ್ಷ ಕುಬೇಂದ್ರಪ್ಪ, ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಸಮಿತಿ ಅಧ್ಯಕ್ಷ ತುಪ್ಪದಹಳ್ಳಿ ಸಿದ್ದಪ್ಪ, ಮುಖಂಡ ರಾಜಪ್ಪ ವ್ಯಾಸಗೊಂಡನಹಳ್ಳಿ, ಸಿ. ತಿಪ್ಪೇಸ್ವಾಮಿ, ಸಾಹಿತಿ ಎನ್.ಟಿ. ಎರ್ರಿಸ್ವಾಮಿ, ಮಾದಿಹಳ್ಳಿ ಮಂಜುನಾಥ್, ಬಿ. ಮಹೇಶ್ವರಪ್ಪ, ಗೌರಿಪುರ ಕುಬೇರಪ್ಪ, ಸಿದ್ದಮ್ಮನಹಳ್ಳಿ ವೆಂಕಟೇಶ್, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಅಶೋಕ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಲೋಹಿತ್ ಮುಂತಾದವರು ಇದ್ದರು.

# ಇಂದು ಪರಸ್ಪರ ಸಂಬಂಧಗಳಲ್ಲಿ ಗಟ್ಟಿತನ ಉಳಿದಿಲ್ಲ



**ಚಿತ್ರದುರ್ಗ ಮುರುಘಾ ಮಠದಲ್ಲಿನ 33ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ**

ಚಿತ್ರದುರ್ಗ, ಡಿ. 6 - ಹಿಂದಿನ ಕಾಲದಲ್ಲಿ ಮನೆ ಸಣ್ಣದಿದ್ದರೂ ಮನಸ್ಸು ದೊಡ್ಡದಾಗಿರುತ್ತಿತ್ತು. ಸಂಸಾರದಲ್ಲಿ ನೆಮ್ಮದಿ ಕಾಣಸಿಗುತ್ತಿತ್ತು. ಇಂದು ಮನೆ, ಮಹಲುಗಳು ಎತ್ತರಕ್ಕೇರಿವೆ. ಆದರೆ, ಮನಸ್ಸುಗಳು ಸಂಕುಚಿತಗೊಂಡು ಪರಸ್ಪರ ಸಂಬಂಧಗಳಲ್ಲಿ ಗಟ್ಟಿತನ ಇಲ್ಲದಂತಾಗಿದೆ ಎಂದು ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ವ್ಯಾಕುಲತೆ ವ್ಯಕ್ತಪಡಿಸಿದರು.

ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ಮೊನ್ನೆ ನಡೆದ ಮೂವತ್ತೂರನೇ ವರ್ಷದ ಹನ್ನೆರಡನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಸಾನ್ನಿಧ್ಯ ವಹಿಸಿ, ಶ್ರೀಗಳು ಮಾತನಾಡಿದರು.

ಸತಿ-ಪತಿಗಳ ನಡುವೆ ಹೊಂದಾಣಿಕೆ ಬಹುಮುಖ್ಯ. ಪರಸ್ಪರ ಹೊಂದಾಣಿಕೆಯಿದ್ದಾಗ ಬದುಕು ಸ್ವರ್ಗ. ಸಾಮರಸ್ಯದಿಂದ ವಿಶ್ವವನ್ನು ಗೆಲ್ಲಬಹುದು. ವಿವಿಧತೆಯಲ್ಲಿ ಏಕತೆಯನ್ನು ಸಾರಿದ ರಾಷ್ಟ್ರ ನಮ್ಮದು. ಅತ್ತೆ- ಸೊಸೆ ಮಧ್ಯೆ ತಾಯಿ-ಮಗಳ ಸಂಬಂಧ ಇರಬೇಕು. ಸಹನೆ ನಮಗೆ ಮುಖ್ಯವಾಗಬೇಕು. ಹಾಗಾಗಿ ಸಹನೆಯ ಸಂಕೇತವಾಗಿ ಭಾರತೀಯ ಸಂಸ್ಕೃತಿಯಲ್ಲಿ ತಾಳಿ ಕಟ್ಟಿಸಲಾಗುತ್ತದೆ. ರೂಪ ಮತ್ತು ರೂಪಾಯಿಗಳು ಶಾಶ್ವತವಲ್ಲ. ಪ್ರೀತಿ, ಪ್ರಾಮಾಣಿಕತೆ ಮತ್ತು ಒಳ್ಳೆಯ ಗುಣಗಳು ಶಾಶ್ವತವಾಗಿರುತ್ತವೆ ಎಂದು ಹೇಳಿದರು.

ಶ್ರೀ ಸಂಗಮನಾಥ ಸ್ವಾಮೀಜಿ ಮಾತನಾಡಿ, ಮದುವೆ ಸಂಬಂಧಗಳನ್ನು ಕೂಡಿಸುವ ಕಾರ್ಯಕ್ಷೇತ್ರ. ದಂಪತಿಗಳು ದೇಶವನ್ನು ಅಭಿವೃದ್ಧಿಪಡಿಸುವ ಮಕ್ಕಳನ್ನು ಸೃಷ್ಟಿ ಮಾಡಬೇಕು. ಸಂಸಾರ ಎನ್ನುವುದು ಬಂಡಿಯ ಗಾಲಿಗಳು ಇದ್ದಂತೆ, ಎರಡು ಗಾಲಿಗಳು ಸಮಾನವಾಗಿ ಸಾಗಬೇಕು. ಇಂದಿನ ಕಾಲಘಟ್ಟದಲ್ಲಿ ವಿದ್ಯಾವಂತರಲ್ಲಿ ಹೊಂದಾಣಿಕೆ ಮನೋಭಾವದ ಕೊರತೆ ಕಂಡುಬರುತ್ತಿದೆ. ಗುರು-ಹಿರಿಯರ ಬಗ್ಗೆ ಗೌರವ, ಅಭಿಮಾನ ಬೆಳೆಸಿಕೊಳ್ಳಬೇಕು. ಸಂಬಂಧಗಳನ್ನು ಒಟ್ಟುಗೂಡಿಸಬೇಕೆಂದರು.

ಶ್ರೀ ಬಸವ ಭೂಷಣ ಸ್ವಾಮೀಜಿ ಮಾತನಾಡಿ, ನವ ವಧು-ವರರಿಗೆ ಉತ್ತಮ ಸಂಸ್ಕಾರ ಕೊಡುವ ಕೆಲಸ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ನಡೆಯುತ್ತಿದೆ. ಸೊಸೆಯನ್ನು ಮಗಳಂತೆ ಕಾಣಬೇಕು. ಸೊಸೆಯೂ ಸಹ ಅತ್ತೆಯನ್ನು ತಾಯಿಯಂತೆ ಪೂಜಿಸಬೇಕು. ಸಣ್ಣಪುಟ್ಟ ವಿಚಾರಗಳಿಗೆ ಮುನಿಸಿಕೊಳ್ಳಬಾರದು. ಹೊಂದಾಣಿಕೆ ಮನೋಭಾವ ಮುಖ್ಯ. ಸೊಸೆಗೆ ಅತ್ತೆ-ಮಾವಂದಿರು ಉತ್ತಮ ಸಂಸ್ಕಾರ ಕೊಡಬೇಕು. ವಿಭೂತಿ, ರುದ್ರಾಕ್ಷಿಧಾರಣೆ ಬಸವ ಸಂಸ್ಕೃತಿಯ ಪ್ರತೀಕವಾಗಿದೆ ಎಂದರು. ಕಾರ್ಯಕ್ರಮದಲ್ಲಿ 9 ಜೋಡಿಗಳ ವಿವಾಹ ನೆರವೇರಿಸಲಾಯಿತು.

ಶ್ರೀ ಮುರುಘೇಂದ್ರ ಸ್ವಾಮೀಜಿ, ಪೈಲ್ವಾನ್ ತಿಪ್ಪೇಸ್ವಾಮಿ ಮತ್ತಿತರರಿದ್ದರು. ಗಂಜಿಗಟ್ಟೆ ಕೃಷ್ಣಮೂರ್ತಿ ಜಾನಪದ ಗೀತೆಗಳನ್ನು ಹಾಡಿದರು.

ಜಮುರಾ ಕಲಾಲೋಕದ ಕಲಾವಿದರು ಪ್ರಾರ್ಥಿಸಿದರು. ವೀರಭದ್ರಪ್ಪ ಸ್ವಾಗತಿಸಿದರು. ಟಿ.ಪಿ. ಜ್ಞಾನಮೂರ್ತಿ ನಿರೂಪಿಸಿದರು.

# ಭೂಮಿ ಒತ್ತುವರಿ ತೆರವಿಗೆ ಪ್ರತ್ಯೇಕ ವಿಭಾಗ

(1ನೇ ಪುಟದಿಂದ) ನೆರವಾಗುವಲ್ಲಿ ರಾಜ್ಯ ಸರ್ಕಾರವೇ ಭಾಗಶಃ ಪರಿಹಾರವಾಗಿ ರೈತರಿಗೆ ತಲಾ 2,000 ರೂ. ಪರಿಹಾರ ಘೋಷಿಸಿದೆ. ಈ ಹಣವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಸಿದ್ಧತೆ ನಡೆಸಲಾಗುತ್ತಿದೆ. ಸಂಕಷ್ಟದಲ್ಲಿರುವ ರೈತರಿಗೆ ಈ ಮೊತ್ತ ಸಾಲದು ಎಂಬ ವಿಚಾರ ನಮಗೂ ಗೊತ್ತಿದೆ, ಜವಾಬ್ದಾರಿಯುತ ಸರ್ಕಾರವಾಗಿ ರೈತರ ಸಂಕಷ್ಟಕ್ಕೆ ಎಲ್ಲಾ ರೀತಿಯಲ್ಲೂ ನೆರವಾಗಲು ಬದ್ಧರಾಗಿದ್ದೇವೆ. ಕೇಂದ್ರ ಸರ್ಕಾರದ ಪರಿಹಾರ ಹಣ ಬಂದ ಕೂಡಲೇ ಆ ಹಣವನ್ನೂ ನೇರವಾಗಿ ರೈತರ ಖಾತೆಗೆ ವರ್ಗಾಯಿಸಲಾಗುವುದು ಎಂದರು.

ರಾಜ್ಯದಲ್ಲಿ 20 ಲಕ್ಷ ರೈತರು ಬೆಳೆ ವಿಮೆ ಮಾಡಿಸಿದ್ದಾರೆ, ವಿಮಾ ಕಂಪೆನಿಗಳು ಈಗಾಗಲೇ 460 ಕೋಟಿ ರೂ. ಬಿಡುಗಡೆಗೊಳಿಸಿವೆ. ಶೀಘ್ರದಲ್ಲಿ 2,000 ಕೋಟಿ ರೂ. ಬೆಳೆ ವಿಮೆ ಬರಲಿದೆ ಎಂದು ಸಚಿವ ಕೃಷ್ಣ ಭೈರೇಗೌಡ ಹೇಳಿದರು.

ಇದರ ಜೊತೆಗೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಫಂಡ್‌ನಿಂದಲೂ ಹಣ ಕ್ರೋಡೀಕರಿಸಿ ರೈತರಿಗೆ 4,000 ಕೋಟಿ ರೂ. ವರೆಗೆ ಬರ ಪರಿಹಾರ ನೀಡಲು ಚಿಂತನೆ ನಡೆಸಲಾಗುತ್ತಿದೆ.

ಬೇರೆ ರಾಜ್ಯಗಳಲ್ಲಿ ನಮಗಿಂತ ಭೀಕರ ಬರ ಇದೆ, 12 ರಾಜ್ಯಗಳಲ್ಲಿ ಮುಂಗಾರು ಅವಧಿಯ ಹಾಗೂ 18 ರಾಜ್ಯಗಳಲ್ಲಿ ಹಿಂಗಾರಿನ ಬರ ಇದೆ.

ಕರ್ನಾಟಕದಲ್ಲಿ ಕಳೆದ ಸೆಪ್ಟೆಂಬರ್ 13ರಂದು ಬರ ರಾಜ್ಯವಾಗಿ ಮೊದಲು ಘೋಷಿಸಲಾಯಿತು, ಸೆಪ್ಟೆಂಬರ್ 22ಕ್ಕೆ 18,200 ಕೋಟಿ ರೂ. ಪರಿಹಾರ ಕೋರಿ ಕೇಂದ್ರಕ್ಕೆ ಮೊದಲ ಮನವಿ ಸಲ್ಲಿಸಲಾಯಿತು. ಎರಡನೇ ಮನವಿಯನ್ನೂ ಸಲ್ಲಿಸಲಾಗಿದೆ. ಆದರೂ, ಬರ ಪರಿಹಾರದ ಹಣ ಬಂದಿಲ್ಲ ಎಂದು ವಿಷಾದಿಸಿದರು.

ರಾಜ್ಯಕ್ಕೆ ಬರ ಪರಿಹಾರದ ಹಣ ತರುವ ಹಾಗೂ ಕೇಂದ್ರ ನಾಯಕರಿಗೆ ರಾಜ್ಯದ ಸಮಸ್ಯೆ ಅರ್ಥ ಮಾಡಿಸಲು ಕೇಂದ್ರ ಗೃಹ ಮತ್ತು ಕೃಷಿ ಸಚಿವರನ್ನು ಭೇಟಿಗೆ ಸಮಯ ಕೋರಿ ಪತ್ರ ಬರೆಯಲಾಗಿತ್ತು. ಆ ಪತ್ರಕ್ಕೆ ಉತ್ತರ ಸಿಗದ ಕಾರಣ ಎರಡೂ ಇಲಾಖೆಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ರಾಜ್ಯದ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಅವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೂ ಈವರೆಗೆ ರಾಜ್ಯಕ್ಕೆ ಪರಿಹಾರ ಮೊತ್ತ ಬಂದಿಲ್ಲ ಎಂದರು.

ಪಶುಗಳಿಗೆ ಮೇವಿನ ಕೊರತೆ ಬರದಿರಲು 7 ಲಕ್ಷ ಮೇವಿನ ಕಿಟ್‌ಗಳನ್ನು ರೈತರಿಗೆ ಉಚಿತವಾಗಿ ನೀಡಲಾಗಿದೆ. ಪಕ್ಕದ ರಾಜ್ಯಗಳಿಗೆ ಮೇವು ಕಳ್ಳಸಾಗಣೆ ಆಗದಂತೆ ಕ್ರಮ ಜರುಗಿಸಲಾಗಿದೆ ಎಂದು ಸಚಿವರು ಇದೇ ಸಂದರ್ಭದಲ್ಲಿ ಹೇಳಿದರು.

ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರರ ಖಾತೆಯಲ್ಲಿ 894 ಕೋಟಿ ರೂ. ಇದ್ದು, ಕುಡಿಯುವ ನೀರಿನ ಪೂರೈಕೆಗೆ ಈ ಮೊತ್ತ ಬಳಸಿಕೊಳ್ಳಲು ಸೂಚಿಸಲಾಗಿದೆ. ಗೋಶಾಲೆಗಳ ಅಗತ್ಯವಿದ್ದರೆ ಅವನ್ನೂ ತೆರೆಯಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

# ಕರ್ಣಿ ನಾಯಕನ ಹತ್ಯೆ : ರಾಜಸ್ಥಾನದಲ್ಲಿ ತೀವ್ರ ಪ್ರತಿಭಟನೆ

ಜೈಪುರ, ಡಿ. 6 – ರಾಜಸ್ಥಾನದ ಕರ್ಣಿ ಸೇನಾದ ನಾಯಕ ಸುಖದೇವ್ ಸಿಂಗ್ ಗೊಗಮೇಡಿ ಹತ್ಯೆಯನ್ನು ಖಂಡಿಸಿ ಪ್ರತಿಭಟನಾಕಾರರು ಹಲವಾರು ಜಿಲ್ಲೆಗಳಲ್ಲಿ ರಸ್ತೆ ತಡೆ ಹಾಗೂ ರೈಲು ತಡೆ ನಡೆಸಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜ್ಯಪಾಲ ಕಲ್‌ರಾಜ್ ಮಿಶ್ರಾ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ರಾಜ್ಯ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮುಖ್ಯಸ್ಥರು ಹಾಗೂ ಜೈಪುರ ಪೊಲೀಸ್ ಆಯುಕ್ತರನ್ನು ಕರೆಸಿ ಪರಿಸ್ಥಿತಿಯ ವಿವರ ಪಡೆದಿದ್ದಾರೆ.

ಗುಂಡೇಟಿಗೆ ಸಿಲುಕಿ ತನ್ನ ಮನೆಯಲ್ಲೇ ಸಾವನ್ನಪ್ಪಿದ ಸುಖದೇವ್ ಸಿಂಗ್ ಪ್ರಕರಣದ ತನಿಖೆಗಾಗಿ ಪೊಲೀಸರು ವಿಶೇಷ ತನಿಖಾ ತಂಡ ರಚಿಸಿದ್ದಾರೆ.

# ಆಕ್ರಮಿತ ಕಾಶ್ಮೀರವೂ ಸಹ ನಮ್ಮದೇ ಎಂದ ಅಮಿತ್ ಷಾ

(1ನೇ ಪುಟದಿಂದ) ಆಕ್ರಮಿತ ಕಾಶ್ಮೀರ ದಿಂದ ಸ್ಥಳಾಂತರಗೊಂಡವರಿಗೆ ನೀಡಲಾಗು ವುದು ಎಂದೂ ಅಮಿತ್ ಷಾ ತಿಳಿಸಿದ್ದಾರೆ. 24 ಸೀಟುಗಳನ್ನು ಪಾಕ್ ಆಕ್ರಮಿತ ಕಾಶ್ಮೀರದ ನಿವಾಸಿಗಳಿಗಾಗಿ ಕಾಯ್ದಿರಿಸಲಾಗುವುದು. ಪಾಕ್ ಆಕ್ರಮಿತ ಕಾಶ್ಮೀರ ಸಹ ನಮ್ಮದೇ ಎಂದೂ ಅಮಿತ್ ಷಾ ಹೇಳಿದ್ದಾರೆ.

ಈ ಮಸೂದೆಗಳ ಮೂಲಕ ಕಳೆದ 70 ವರ್ಷಗಳಲ್ಲಿ ಹಕ್ಕುಗಳಿಂದ ವಂಚಿತರಾದವರಿಗೆ ನ್ಯಾಯ ಒದಗಿಸಲಾಗುವುದು. ಸ್ಥಳಾಂತರಗೊಂಡವರಿಗೆ ಮೀಸಲಾತಿ ಮೂಲಕ ದನಿ ಕಲ್ಪಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

# ರಾಜಕೀಯ ತಿರುವು ಪಡೆದ ದರ್ಗಾ ರಸ್ತೆ ಕಾಮಗಾರಿ

(1ನೇ ಪುಟದಿಂದ) ಹರೀಶ್‌ರವರು ಅಧಿವೇಶನದಲ್ಲಿ ಇರುವುದರಿಂದ, ನಾನು ಬಂದು ಸ್ಥಳ ಪರಿಶೀಲನೆ ನಡೆಸಿದ ನಂತರ ಕಾಮಗಾರಿ ಆರಂಭ ಮಾಡಿ ಎಂದು ಹೇಳಿದ್ದಾರೆ. ಹಾಗಾಗಿ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸ ಲಾಯಿತು ಎಂದು ಹೇಳಿದರು.

ಈ ವೇಳೆ ಜಯಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಮುಜಾಮಿಲ್ ಬಿಲ್ಲು, ದಾದಾ ಖಲಂದರ್, ಮುಖಂಡ ದಾದಾಪೀರ್ ಭಾನುವಳ್ಳಿ ಸೇರಿದಂತೆ ಇತರರು ರಸ್ತೆಯ ಕಾಮಗಾರಿ ಬೇಗನೆ ಆರಂಭಿಸಬೇಕು ಎಂದು ಒತ್ತಡ ಹೇರುವ ಮೂಲಕ ರಸ್ತೆಯಲ್ಲಿ ಧರಣಿ ಕುಳಿತುಕೊಳ್ಳಲು ಮುಂದಾದರು.

ಸ್ಥಳಕ್ಕೆ ಆಗಮಿಸಿದ ದಾವಣಗೆರೆ ಲೋಕೋಪಯೋಗಿ ಇಲಾಖೆ ಎಇಇ ನರೇಂದ್ರ ಬಾಬು, ನಾನು ಜಿಲ್ಲಾಧಿಕಾರಿಗಳಿಗೆ ಮತ್ತು ಇದಕ್ಕೆ ಸಂಬಂಧಿಸಿದಂತೆ ರಾಜ್ಯದ ಹಿರಿಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದು, ಕಾಮಗಾರಿ ಆರಂಭ ಮಾಡುವಂತೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ ಪುನಃ ಕಾಮಗಾರಿ ಆರಂಭಿಸಿದರು.

ನಂತರ ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ದೂಡಾ ಮಾಜಿ ಸದಸ್ಯ ರಾಜು ರೋಖಡೆ, ಶೇರಾಪುರ ಅಜ್ಜಪ್ಪ, ವಿನಾಯಕ ಆರಾಧ್ಯಮಠ ಇತರೆ ಬಿಜೆಪಿ ಮುಖಂಡರು ಆಗಮಿಸಿ, ಕಾಮಗಾರಿ ಮಾಡುತ್ತಿದ್ದ ಜೆಸಿಬಿ ಯಂತ್ರವನ್ನು ಬಂದ್ ಮಾಡಿಸಿ, ನಾಳೆ ಶಾಸಕ ಬಿ.ಪಿ. ಹರೀಶ್ ಆಗಮಿಸುತ್ತಾರೆ, ಅವರು ಬಂದು ಸ್ಥಳ ಪರಿಶೀಲನೆ ನಡೆಸಿದ ನಂತರ ಕಾಮಗಾರಿ ಮಾಡುವಂತೆ ಪಟ್ಟು ಹಿಡಿದ ಪರಿಣಾಮ ಅಧಿಕಾರಿಗಳ ತಂಡವು ತಮಗೆ ಏನು ಮಾಡಬೇಕೆಂದು ತೋಚದೇ ಮರದ ಕೆಳಗೆ ಹೋಗಿ ನಿಂತುಕೊಂಡಿತು.

ಪಿಎಸ್‌ಐ ದೇವಾನಂದ್ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಸೂಕ್ತ ಬಂದೋಬಸ್ತ್ ಮಾಡಿದ್ದರು. ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ. ಮಹಾಂತೇಶ್, ಗುತ್ತಿಗೆದಾರ ಶಿವಕುಮಾರ್, ನಾಯ್ಕ್ ಕಾರ್ತಿಕ್, ದಾದಾಪೀರ್ ಮತ್ತಿತರರು ಹಾಜರಿದ್ದರು.

# ಬಿಜೆಪಿ ಸದಸ್ಯರಿಂದ ಸಭಾತ್ಯಾಗ

(1ನೇ ಪುಟದಿಂದ) ಒಂದೇ ಸಮುದಾಯಕ್ಕೆ 10,000 ಕೋಟಿ ರೂ. ಘೋಷಣೆ ಮಾಡಿರುವುದು ಸರಿಯಲ್ಲ, ಈ ಬಗ್ಗೆ ವಿವರಣೆ ಕೊಡಿ ಎಂದು ಒತ್ತಾಯಿಸಿದರು.

ಇದಕ್ಕೆ ಆಡಳಿತ ಪಕ್ಷದ ಕಡೆಯಿಂದ ಆಕ್ಷೇಪ ವ್ಯಕ್ತವಾಗಿ ಒಮ್ಮಲೇ ಎಲ್ಲರೂ ಎದ್ದು ನಿಂತು ಬಿಜೆಪಿ ಸದಸ್ಯರ ವಿರುದ್ಧ ಮುಗಿಬಿದ್ದರು.

ಈ ಸಂದರ್ಭದಲ್ಲಿ ಯಾರು ಏನು ಮಾತನಾ ಡುತ್ತಿದ್ದಾರೆ ಎಂಬುದು ತಿಳಿಯಲಾಗಲಿಲ್ಲ, ಸಭಾಧ್ಯಕ್ಷ ಯು.ಟಿ. ಖಾದರ್ ಮಾಡಿದ ಮನವಿಗೂ ಸದ ಸ್ಯರು ಸ್ಪಂದಿಸಲಿಲ್ಲ, ಇದರಿಂದ ಕೋಲಾಹಲ ವಾತಾವರಣ ಉಂಟಾಯಿತು.

ಕೊನೆಗೆ ಸಭಾಧ್ಯಕ್ಷರು ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಮಾತನಾಡಲು ಅವಕಾಶ ನೀಡುತ್ತಿದ್ದಂತೆ ಗೊಂದಲ ತಿಳಿಗೊಂಡಿತು.

ನಂತರ ಮಾತನಾಡಿದ ಅಶೋಕ್, ಬರ ಪರಿಹಾರ ಕಾಮಗಾರಿ ಕೈಗೊಂಡಿಲ್ಲ, ರೈತರ ಬೆಳೆ ಹಾನಿಗೆ ಹಣ ನೀಡಿಲ್ಲ, ಸದನ ನಡೆಯುವ ಸಂದರ್ಭದಲ್ಲಿ ಒಂದು ಸಮುದಾಯದ ಅಭಿವೃದ್ಧಿಗೆ 10,000 ಸಾವಿರ ಕೋಟಿ ರೂ. ನೀಡುವ ಘೋಷಣೆಯನ್ನು ಹಿಂದಕ್ಕೆ ಪಡೆಯಬೇಕೆಂದರು.


ಮುಖ್ಯಮಂತ್ರಿಗಳು ತಮ್ಮ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ, ಸದನದಲ್ಲಿ ಮಾತನಾಡಲು ಅವಕಾಶ ನೀಡುವುದಿಲ್ಲ ಎಂದು ಅಶೋಕ್ ಹೇಳುತ್ತಿದ್ದಂತೆ ಮತ್ತೆ ಆಡಳಿತ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶ ಮಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಹಣವನ್ನು ಒಂದೇ ಬಾರಿಗೆ ಬಿಡುಗಡೆ ಮಾಡುತ್ತೇವೆ ಎಂದು ಹೇಳಿಲ್ಲ, ಹಂತ ಹಂತವಾಗಿ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿ ಅವರು ಮಾಡಿರುವ ಘೋಷಣೆ ಆಕ್ಷೇಪಾರ್ಹ ವಲ್ಲ ಎಂದು ಹೇಳುತ್ತಿದ್ದಂತೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಹೇಳಿಕೆಯನ್ನು ಬಹಿಷ್ಕರಿಸಿ ಸಭಾತ್ಯಾಗ ಮಾಡಿದರು.

# ರಾಷ್ಟ್ರಮಟ್ಟದ ಕರಾಟೆ ಪಂದ್ಯಕ್ಕೆ ಯೋಗರಾಜ್, ತುಳಸಿ

ದಾವಣಗೆರೆ, ಡಿ.6- ಶಿವಮೊಗ್ಗದ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ಶಾಲಾ ಶಿಕ್ಷಣ ಇಲಾಖೆಯ ರಾಜ್ಯಮಟ್ಟದ ಕರಾಟೆ



ಪಂದ್ಯಾವಳಿಯಲ್ಲಿ ನಗರದ ಆರ್. ಯೋಗರಾಜ್ ಪ್ರಥಮ ಸ್ಥಾನವನ್ನು ಹಾಗೂ ತುಳಸಿ ಎಸ್.ಎ. ಇವರು ತೃತೀಯ ಸ್ಥಾನ ಪಡೆದಿದ್ದಾರೆ.

ಈ ಇಬ್ಬರು ದೆಹಲಿಯಲ್ಲಿ ನಡೆಯಲಿರುವ ಸ್ಕೂಲ್ ಗೇಮ್ಸ್ ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಇವರುಗಳಿಗೆ ತರಬೇತುದಾರರಾದ ಎಸ್. ಯುವರಾಜ್, ರವಿನಾರಾಯಣ್, ಪ್ರವೀಣ್ ಜಿ. ಹಾಗೂ ಬ್ರಹ್ಮಚೈತನ್ಯ ಮಂದಿರದ ಅಧ್ಯಕ್ಷ ಪಿ.ಸಿ. ಮಹಾಬಲೇಶ್ ಮತ್ತು ಕಾರ್ಯದರ್ಶಿ ಬಿ.ಎಸ್. ಸುಬ್ರಮಣ್ಯ ಅವರುಗಳು ಅಭಿನಂದಿಸಿದ್ದಾರೆ.

# ಜಿಗಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ



ಮಲೇಬೆನ್ನೂರು, ಡಿ.6- ಜಿಗಳಿಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ನಡೆಯುತ್ತಿರುವ ಎನ್ನೆಸ್ಸೆಸ್ ಶಿಬಿರದ 5ನೇ ದಿನದಂದು ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಈ ವೇಳೆ ಮಾತನಾಡಿದ ಟಿ.ಹೆಚ್‌ಓ ಡಾ. ಪ್ರಶಾಂತ್ ಅವರು, ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು, ನಿರ್ಲಕ್ಷ್ಯ ಸಲ್ಲದು ಎಂದರು.

ಅಪೂರ್ವ ಆಸ್ಪತ್ರೆಯ ಹೃದಯರೋಗ ಹಾಗೂ ಅರಿವಳಿಕೆ ತಜ್ಞ ಡಾ. ಅರ್ಜುನ್ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ಆರೋಗ್ಯ ನಮ್ಮ ದೊಡ್ಡ ಸಂಪತ್ತಾಗಿದ್ದು, ಅದನ್ನು ಜೋಪಾನವಾಗಿ ನೋಡಿಕೊಳ್ಳಬೇಕು. ದೈಹಿಕ ಶ್ರಮ, ಮಿತ ಹಾಗೂ ಪೌಷ್ಠಿಕ ಆಹಾರ ಅಗತ್ಯವಾಗಿದ್ದು, ದುಶ್ಚಟಗಳು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಲಿವೆ ಎಂದು ಎಚ್ಚರಿಸಿದರು.

ಹೊಳೆಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚೇತನ್, ಅಪೂರ್ವ ಆಸ್ಪತ್ರೆಯ ತಜ್ಞವೈದ್ಯರಾದ ಡಾ. ಅಪೂರ್ವ, ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ತಾ.ಹಿರಿಯ ಪ್ರಾಥಮಿಕ ಸುರಕ್ಷಾಧಿಕಾರಿ ಸುಧಾಸುಲೇಖ ಮತ್ತು ಹಿರಿಯ ಆರೋಗ್ಯ ಸಹಾಯಕಿ ಭಾಗ್ಯಲಕ್ಷ್ಮಿ, ಆಶಾ ಕಾರ್ಯಕರ್ತರಾದ ನೇತ್ರಾವತಿ, ಲತಾ, ವನಜಾಕ್ಷಮ್ಮ, ಶಂಕ್ರಮ್ಮ ಹಾಗೂ ಅಪೂರ್ವ ಆಸ್ಪತ್ರೆಯ ಸಿದ್ದೇಶ್, ಮನು ಅವರುಗಳು ಜನರ ಆರೋಗ್ಯ ತಪಾಸಣೆಯಲ್ಲಿ ಪಾಲ್ಗೊಂಡಿದ್ದರು.

ಗ್ರಾಮದ ಜಿ. ಆನಂದಪ್ಪ, ಜಿ.ಪಿ. ಹನುಮಗೌಡ, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಶಿಬಿರದ ಕಾರ್ಯಕ್ರಮಾಧಿಕಾರಿಗಳಾದ ಡಾ. ಬಿ.ಕೆ. ಮಂಜುನಾಥ್, ಡಾ. ಸಿ. ಚಂದ್ರಶೇಖರ್, ಶಾಲೆಯ ಶಿಕ್ಷಕರಾದ ಮಲ್ಲಿಕಾರ್ಜುನ್, ಲಿಂಗರಾಜ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ, ಪತ್ರಕರ್ತ ಪ್ರಕಾಶ್, ಕುಂಬಳೂರು ವಾಸು, ವಿಜಯಭಾಸ್ಕರ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಗ್ರಾಮಗಳ ಘೋಷಣೆ

(1ನೇ ಪುಟದಿಂದ) ಕಂದಾಯ ಗ್ರಾಮಗಳನ್ನು ಘೋಷಿಸುವಂತೆ ತಾಕೀತು ಮಾಡಲಾಗುತ್ತಿದೆ. ಅಲ್ಲದೆ, ಪಟ್ಟಿಯಿಂದ ಬಿಟ್ಟುಹೋಗಿರುವ ತಾಂಡಾ, ಹಟ್ಟಿ, ಒಡ್ಡರ ಹಟ್ಟಿಗಳನ್ನು ಹೊಸದಾಗಿ ಸೇರಿಸುವಂತೆಯೂ ಸೂಚಿಸಲಾಗಿದೆ. ಇದೀಗ ಡ್ರೋನ್ ಮೂಲಕ ಸರ್ವೇ ಕೆಲಸ ಆರಂಭಸಿದ್ದು, ಡ್ರೋನ್ ಮೂಲಕವೂ ಕಂದಾಯ ಗ್ರಾಮಗಳ ಹುಡುಕಾಟ ನಡೆದಿದೆ ಎಂದರು.

ಅಲ್ಲದೆ, ಬಿಟ್ಟುಹೋಗಿರುವ ಗ್ರಾಮಗಳ ಸೇರ್ಪಡೆಗೆ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ಶಾಸಕರಲ್ಲೂ ಮನವಿ ಮಾಡಲಾಗಿದೆ ಎಂದರು.

ಸದಸ್ಯರು, ಸಂಘ ಸಂಸ್ಥೆಗಳು ದಯವಿಟ್ಟು ಬಿಟ್ಟುಹೋಗಿರುವ ಗ್ರಾಮಗಳ ಸೇರ್ಪಡೆಗೆ ಸಹಕರಿಸಬೇಕು. ಬಡವರಿಗೆ ಸಹಾಯವಾಗುವಂತಿದ್ದರೆ, ಯಾರೇ ಪಟ್ಟಿ ಕೊಟ್ಟರೂ ಪರಿಗಣಿಸಲಾಗುವುದು. ನಮ್ಮ ಸರ್ಕಾರ ಬಡಜನರ ಪರವಾಗಿಯೇ ಇದೆ ಎಂದು ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.




## ಕನಕ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ
## ಚುನಾವಣೆ – 2023-2028




ಆತ್ಮೀಯ ಬಂಧುಗಳೇ,

ದಿನಾಂಕ : 10-12-2023 ರಂದು ಭಾನುವಾರ ನಡೆಯಲಿರುವ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ. ಇದರ ಚುನಾವಣೆಗೆ ಈ ಕೆಳಕಂಡ ನಾವುಗಳು ನಿರ್ದೇಶಕರ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ಆದ ಪ್ರಯುಕ್ತ ತಾವುಗಳು ತಮ್ಮ ಅಮೂಲ್ಯವಾದ ಮತವನ್ನು ನಮ್ಮ ತಂಡಕ್ಕೆ ನೀಡಿ ಜಯಶೀಲರನ್ನಾಗಿ ಮಾಡಿ, ತಮ್ಮೆಲ್ಲರ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಬ್ಯಾಲೆಟ್ ನಮೂನೆ

ಶ್ರೀ ಲೋಕಿಕೆರೆ ಸಿದ್ದಪ್ಪನವರ ತಂಡ
ವಕೀಲರು

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಗುರುತು | ಚಿಹ್ನೆ |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 |  ಚಂದ್ರಶೇಖರ್ ಬಿ. ಜಮ್ಮಳ್ಳಿ ಮೊ. : 99022 22722 | ಕ್ಯಾಮೆರಾ | |
| 6 |  ಚೌಡಪ್ಪ ಪಿ. ಮೊ. : 99457 05539 | ಬ್ಯಾಟ್ | |
| 7 |  ಜಯಪ್ಪ ಎಂ. ಬಳ್ಳಾರಿ ಮೊ. : 9036655407 | ಸೀಲಿಂಗ್ ಫ್ಯಾನ್ | |
| 8 | | | |
| 9 | | | |
| 10 | | | |
| 11 | | | |
| 12 |  ಶ್ರೀಮತಿ ಭಾಗ್ಯಮ್ಮ ಡಿ.ಬಿ. ದೀಟೂರು ಮಹಿಳಾ ಮೀಸಲಾತಿ ಮೊ. : 9980487019 | ಗ್ಯಾಸ್ ಸಿಲಿಂಡರ್ | |
| 13 |  ರುದ್ರಪ್ಪ ಹೆಚ್. ಎಂ. ಮೊ. : 9448247127 | ದ್ರಾಕ್ಷಿ ಗೊಂಚಲು | |
| 14 | | | |
| 15 | | | |
| 16 |  ಶಫೀ ಅಹ್ಮದ್ ಹಿಂದುಳಿ ವರ್ಗ 'ಬ' ಮೊ. : 9742913199 | ಹೂಕೋಸು | |
| 17 | | | |
| 18 |  ಸಂಗೇಗೌಡ ಎಸ್. (ರಾಜಣ್ಣ) ಮೊ. : 9036759261 | ಆಟೋರಿಕ್ಷಾ | |
| 19 |  ಸಕ್ರೆನಾಯ್ಕ್ ಪರಿಶಿಷ್ಟ ಜಾತಿ ಮೊ. : 9900637498 | ಪ್ರೆಶರ್ ಕುಕ್ಕರ್ | |
| 20 |  ಡಾ. ಸಿದ್ದಪ್ಪ ಕೆ. ಎಂಬಿಬಿಎಸ್, ಎಂಡಿ. ಪರಿಶಿಷ್ಟ ಜಾತಿ ಮೊ. : 9986206226 | ಗಾಜಿನ ಲೋಟ | |
| 21 |  ಲೋಕಿಕೆರೆ ಸಿದ್ದಪ್ಪ ಟಿ.ಹೆಚ್. ವಕೀಲರು ಮೊ. : 9449684096 | ತೆಂಗಿನಕಾಯಿ | |
| 22 |  ಶ್ರೀಮತಿ ಸುಧಾ ಕೆ ಮಹಿಳಾ ಮೀಸಲಾತಿ ಮೊ. : 9481527290 | ಕಿರೀಟ | |

**ಮತದಾನ ದಿನಾಂಕ : 10-12-2023ನೇ ಭಾನುವಾರ**
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00 ರ ವರೆಗೆ
ಸ್ಥಳ : ಶ್ರೀಮತಿ ಸುಂದರಮ್ಮ ರಾಜನಹಳ್ಳಿ ಲಕ್ಷ್ಮಣ ಶೆಟ್ಟಿ ಮಹಾತ್ಮ ವಿದ್ಯಾಲಯ, (ಕಿರಿಯ ಪ್ರಾಥಮಿಕ ಶಾಲೆ), ಬಡಾವಣೆ ಪೊಲೀಸ್ ಠಾಣೆ ಎದುರು, ಸೀತಮ್ಮ ಕಾಲೇಜ್ ಹತ್ತಿರ, 1ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.

**ತಮ್ಮ ಸೇವಾಕಾಂಕ್ಷಿಗಳು :**
✦ ಲೋಕಿಕೆರೆ ಸಿದ್ದಪ್ಪ ಟಿ.ಹೆಚ್, ✦ ಸಂಗೇಗೌಡ ಎಸ್. ✦ ಚಂದ್ರಶೇಖರ್ ಬಿ. ✦ ಚೌಡಪ್ಪ ಪಿ. ✦ ಜಯಪ್ಪ ಎಂ. ✦ ಶ್ರೀಮತಿ ಭಾಗ್ಯಮ್ಮ ಡಿ.ಬಿ. ✦ ರುದ್ರಪ್ಪ ಹೆಚ್.ಎಂ. ✦ ಶಫೀ ಅಹ್ಮದ್ ✦ ಸಕ್ರನಾಯ್ಕ್, ✦ ಡಾ. ಸಿದ್ದಪ್ಪ ಕೆ. ✦ ಶ್ರೀಮತಿ ಸುಧಾ ಕೆ.

## ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆ : ವಿಜಯ ಅಗಡಿ ಮಾರ್ಷಲ್ ಆರ್ಟ್ಸ್ ಕರಾಟೆ ಪಟುಗಳ ಸಾಧನೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಡಿ.6- ಶ್ರೀ ಪಂಚಾಕ್ಷರಿ ಮಾರ್ಷಲ್ ಆರ್ಟ್ಸ್ ಟ್ರಸ್ಟ್ ಸಂಸ್ಥೆಯು, ಬಳ್ಳಾರಿ ವಾಲ್ಮೀಕಿ ಭವನದಲ್ಲಿ ಆಯೋಜಿಸಿದ್ದ 4ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಶಹರದ ವಿಜಯ ಅಗಡಿ ಮಾರ್ಷಲ್ ಆರ್ಟ್ಸ್ ಸ್ಪೋರ್ಟ್ಸ್ ಕ್ಲಬ್ ಕರಾಟೆ ಪಟುಗಳು ಒಟ್ಟು 16 ಚಿನ್ನ, 13 ಬೆಳ್ಳಿ, 11 ಕಂಚು ಮತ್ತು ಕುಮಿತೆ (ಫೈಟಿಂಗ್) ವಿಭಾಗದಲ್ಲಿ ಒಟ್ಟು 22 ಟ್ರೋಫಿ ಪಡೆದು ಉತ್ತಮ ಸಾಧನೆ ಮಾಡಿರುತ್ತಾರೆ.

ಈ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ 10 ರಾಜ್ಯಗಳಿಂದ ಸುಮಾರು 1500 ಕರಾಟೆ ಪಟುಗಳು ಭಾಗವಹಿಸಿದ್ದರು. ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ ಶಹರದ ಒಟ್ಟು 40 ಕರಾಟೆ ಪಟುಗಳು ಪದಕ ವಿಜೇತರಾಗಿದ್ದಾರೆ

ಕಟಾ ಮತ್ತು ಕುಮಿತೆ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಉನ್ನತಿ ಕೆ.ಎಮ್, ನಿಶ್ಚಿತಾ ಐ.ಎಂ, ಭರತ್ ಕೆ, ಮೋನಿಕಾ ಆರ್.ಆರ್, ಭುವನ್ ಎಸ್.ಡಬ್ಲ್ಯೂ, ತರುಣ್ ಕೆ.ಎ, ಜೀವನ್ ಸಿ.ಕೆ, ಅನುಷ್ಕಾ ಟಿ.ಕೆ, ಸಾಯಿ ಸಾನ್ವಿತ್ ಎಂ.ಕೆ, ಯುವರಾಜ್, ವಿಜಯ ಎಂ.ಕೆ, ಅಕ್ಷಯ್ ಕೆ . ಬಿ , ಮನೋಜ್ ಕೆ, ಎ. ಸಲ್ಮಾನ್ ಮತ್ತು ನೇಹಾ ಜಿ.ಎನ್ ಪಡೆದಿರುತ್ತಾರೆ.

ದ್ವಿತೀಯ ಸ್ಥಾನವನ್ನು ಸೃಷ್ಟಿ ಎಸ್.ಬಿ., ಅಕ್ಷತಾ ಎನ್.ಕೆ, ಸಿರಿ ಜಿ.ಜಿ, ಸನ್ನಿಧಿ ವೈ, ಪವನಗೌಡ, ಚಂದನ ಎನ್.ಕೆ, ಪ್ರಣವ್ ಸಿ.ಎಂ, ಹರ್ಷಿತ್ ಆರ್.ಪಿ, ವಿಕ್ಕಿ ಕೆ.ಎಂ, ಮಾಹುಲ್ ಬಿ.ಎನ್, ಸತೀಶ್ ಎಸ್.ಎಲ್, ಮನು ಎಲ್ ಮತ್ತು ಅಮೃತ್ ಎನ್.ಪಿ, ಪಡೆದಿರುತ್ತಾರೆ.

ತೃತೀಯ ಸ್ಥಾನವನ್ನು ಕನಿಷ್ಕ್ ವಿ. ಅಗಡಿ, ಯೋಗೇಶ್ ಎಲ್, ಹರಣಿ ಎನ್.ಸಿ, ಸಂತೋಷ್ ವಿ.ಐ, ಸಿದ್ದಾರ್ಥ್, ಸೋಹನ್ ಎಸ್.ಬಿ, ಸುಬ್ರಮಣ್ಯ ಆರ್.ಪಿ, ಪವನ್ ಎಮ್, ಆದರ್ಶ ಜಿ.ಎನ್, ಆಯುಷ್ ಎನ್.ಪಿ ಮತ್ತು ಕಿಶೋರ್ ಎಸ್.ಹೆಚ್ ಗಳಿಸಿರುತ್ತಾರೆ.

ವಿಜೇತ ವಿದ್ಯಾರ್ಥಿಗಳನ್ನು ತರಬೇತಿದಾರರಾದ ಶಿಹಾನ್ ವಿಜಯ ಅಗಡಿ ಹಾಗೂ ಪಾಲಕರು ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

## ಎಚ್ಚರ ! ಎಚ್ಚರ !! ಅಂತರ್ಜಾಲದಲ್ಲಿ ಕಳ್ಳರಿದ್ದಾರೆ ಎಚ್ಚರ !!!

ಇಂದಿನ ದಿನಮಾನಗಳಲ್ಲಿ ಅಂತರ್ಜಾಲದ ಬಳಕೆ ಎಲ್ಲಾ ಕ್ಷೇತ್ರಗಳಲ್ಲಿ ಸರ್ವೇಸಾಮಾನ್ಯವಾಗಿ ಅತ್ಯವಶ್ಯವಾಗಿದೆ. ಮಕ್ಕಳ ವಿದ್ಯಾಭ್ಯಾಸದಿಂದ ಹಿಡಿದು ದೊಡ್ಡವರ ವ್ಯವಹಾರದವರೆಗೂ ಸುಮಾರು ಕಾರ್ಯಗಳಲ್ಲಿ ಬೇಕಾಗಿದೆ. ತಂತ್ರಜ್ಞಾನದ ಸಾಧನಗಳು ಹಾಗೂ ಅಂತರ್ಜಾಲವು ಇಲ್ಲದಿದ್ದಲ್ಲಿ ಇಂದಿನ ಕೆಲಸಕಾರ್ಯಗಳನ್ನು ನಿಭಾಯಿಸುವುದು ಕಷ್ಟಾಸಾಧ್ಯದ ಮಾತಾಗಿದೆ. ಇಂದಿನ ದಿನಗಳಲ್ಲಿ ಮಕ್ಕಳಿಗೆ ಹೋಂ ವರ್ಕ್, ಯಾವುದೇ ಚಟುವಟಿಕೆ ಅಥವಾ ಮಾಹಿತಿಯಾದರೂ ಶಾಲೆಯಿಂದ ನೇರವಾಗಿ ವಾಟ್ಸಾಪ್ ಮುಖಾಂತರ ತಲುಪಿಸುವ ವ್ಯವಸ್ಥೆಗೆ ಬಂದು ತಲುಪಿರುವುದು ಯಾವುದೇ ಅತಿಶಯೋಕ್ತಿ ಏನಿಲ್ಲ. ಮಕ್ಕಳಾದರು ಮೊಬೈಲ್ ಬಳಕೆ ಮಾಡಲೇಬೇಕಾದ ಹಾಗೂ ತಂದೆ-ತಾಯಿಗಳಾದರೂ ಕೊಡಲೇಬೇಕಾದ ಪರಿಸ್ಥಿತಿ ಬಂದೊದಗಿದೆ.

ತಂತ್ರಜ್ಞಾನದ ಸಾಧನಗಳನ್ನು ಅಂತರ್ಜಾಲಕ್ಕೆ ಸಂಪರ್ಕಿಸಿ ಉಪಯೋಗಿಸುವಾಗ ಕೆಲವು ಬಾರಿ ಸ್ಪೈವೇರ್ ಸಾಫ್ಟ್‌ವೇರ್‌ಗಳು ನಿಮ್ಮ ಸಾಧನಗಳಲ್ಲಿ ಇನ್‌ಸ್ಟಾಲ್ ಆಗಲು ನಿಮ್ಮನ್ನು ಕೇಳುತ್ತವೆ. ಹಲವಾರು ಬಾರಿ ನಮಗೆ ಗೊತ್ತಿಲ್ಲದೆ ನಾವು ಓಕೆ ಬಟನ್ ಕ್ಲಿಕ್ಕಿಸಿ ಇನ್‌ಸ್ಟಾಲ್ ಆಗಲು ಸಮ್ಮತಿ ಸೂಚಿಸುತ್ತೇವೆ. ಈ ಸ್ಪೈವೇರ್ ಸಾಫ್ಟ್‌ವೇರ್‌ಗಳು ಒಂದು ಬಾರಿ ನಮ್ಮ ಸಾಧನಗಳನ್ನು ಸೇರಿಕೊಂಡರೆ ಆಯಿತು, ನಾವು ಮಾಡುವ ಪ್ರತೀ ಕೆಲಸ ಕಾರ್ಯದ ಮಾಹಿತಿಯನ್ನು, ನಮ್ಮ ಸಾಧನಗಳಲ್ಲಿ ಇರುವ



ಎಲ್ಲಾ ತರಹದ ಫೈಲ್ಸ್‌ಗಳನ್ನು ತನ್ನ ಮಾಲೀಕನಿಗೆ ಕಳುಹಿಸುವುದು ಅದರ ಕೆಲಸವಾಗಿರುತ್ತದೆ. ಹಾಗಾಗಿ ಯಾವುದಾದರು ಸಾಫ್ಟ್‌ವೇರ್‌ಗಳನ್ನು ಅಥವಾ ಗೇಮ್ಸ್‌ಗಳನ್ನು ಇನ್‌ಸ್ಟಾಲ್ ಮಾಡುವ ಮುನ್ನ ತುಂಬಾ ಎಚ್ಚರವಿರಲಿ.

ಕೆಲವು ಬಾರಿ ನೀವು ಡೌನ್‌ಲೋಡ್ ಮಾಡುವಾಗ ಮಾಲ್‌ವೇರ್ ಸಾಫ್ಟ್‌ವೇರ್‌ಗಳು ನಿಮ್ಮ ಸಾಧನಗಳನ್ನು ಸೇರಬಹುದು. ಈ ಮಾಲ್‌ವೇರ್ ಸಾಫ್ಟ್‌ವೇರ್‌ಗಳು ನಿಮ್ಮ ಸಾಧನದ ಕಾರ್ಯವೈಖರಿಯನ್ನೇ ಬದಲಿಸಬಹುದು. ಉದಾಹರಣೆಗೆ, ನೀವು ಯಾವುದೋ ಒಂದು ಮುಖ್ಯವಾದ ಕೆಲಸವನ್ನು ಎಂ. ಎಸ್. ವರ್ಡ್ ನಲ್ಲಿ ಟೈಪ್‌ಮಾಡಿ ಸೇವ್ ಮಾಡಿರುತ್ತೀರಾ, ನಂತರ ನೋಡಿದಾಗ ಅದು ಇಮೇಜ್ ಫಾರ್ಮಾಟ್ ಆಗಿ ಬದಲಾಗಿರುತ್ತದೆ. ಆಗ ನೀವು ನಿಮ್ಮ ಮುಖ್ಯವಾದ ಫೈಲನ್ನು ಕಳೆದುಕೊಳ್ಳುವುದಾಗುತ್ತದೆ. ಅಷ್ಟೇ ಅಲ್ಲದೆ ಈ ಮಾಲ್‌ವೇರ್ ನಿಮ್ಮ ಸಾಧನದ ಕ್ಷಮತೆಯನ್ನು ಕ್ಷೀಣಿಸುವುದಲ್ಲದೆ ಇನ್ನೂ ಅನೇಕ ತೊಂದರೆಗಳನ್ನುಂಟು ಮಾಡುತ್ತದೆ. ಹಾಗಾಗಿ ಯಾವುದಾದರು ಫ್ರೀಯಾಗಿ ಸಿಗುವ ಸಾಫ್ಟ್‌ವೇರ್ಸ್‌ಗಳು ಮತ್ತು ಫೈಲ್‌ಗಳನ್ನು ಡೌನ್‌ಲೋಡ್ ಮಾಡುವಾಗ ಮೂಲದ ಮಾಹಿತಿ ಇಲ್ಲದೆ ಡೌನ್‌ಲೋಡ್ ಮಾಡಬಾರದು ಇಲ್ಲದಿದ್ದಲ್ಲಿ ಅಪಾಯ ಖಂಡಿತಾ, ಎಚ್ಚರ.

ಕೆಲವು ವೆಬ್‌ಸೈಟ್‌ಗಳನ್ನು ಬಳಸುವಾಗ ತುಂಬಾ ಜಾಗರೂಕರಾಗಿರಬೇಕು. ಸುಮಾರು ಫೇಕ್ ವೆಬ್‌ಸೈಟ್‌ಗಳನ್ನು ಬಳಸಿ ನಿಮ್ಮ ಮುಖ್ಯವಾದ ಅಂದರೆ ಮೊಬೈಲ್ ನಂಬರ್, ಬ್ಯಾಂಕ್ ಅಕೌಂಟ್, ಡೆಬಿಟ್ ಕಾರ್ಡ್, ಪಿನ್ ನಂಬರ್ ಇನ್ನೂ ಹಲವಾರು ಅಕೌಂಟ್ಸ್‌ಗಳನ್ನು ಹ್ಯಾಕ್ ಮಾಡಲು ಬೇಕಾದ ಎಲ್ಲಾ ಮಾಹಿತಿಯನ್ನು ನಿಮಗೆ ಗೊತ್ತಾಗದ ಹಾಗೆ ಕಲೆಹಾಕುತ್ತಾರೆ. ಇದನ್ನು ನಮ್ಮ ಸೈಬರ್ ಭಾಷೆಯಲ್ಲಿ ಫಿಷಿಂಗ್ ಅಟ್ಯಾಕ್ ಎಂದು ಕರೆಯಲಾಗುತ್ತದೆ. ಹಾಗಾಗಿ ಅಂತರ್ಜಾಲದಲ್ಲಿ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳುವಾಗ ಫೇಕ್ ವೆಬ್‌ಸೈಟ್ ಎಂದು ಖಚಿತಪಡಿಸಿಕೊಳ್ಳುವುದನ್ನು ಮರೆಯದಿರಿ.

**ಇಂಟರ್‌ನೆಟ್ ಬಳಕೆ ಮಾಡುವಾಗ ಕೆಲವೊಂದು ಮಾರ್ಗಸೂಚಿಗಳು**

- ✦ ನಿಮ್ಮ ಪಾಸ್‌ವರ್ಡ್‌ಗಳನ್ನು ತಪ್ಪದೇ ಒಂದು ತಿಂಗಳಿಗೊಮ್ಮೆ ಬದಲಾಯಿಸುವುದು
- ✦ ನಿಮ್ಮ ಪಾಸ್‌ವರ್ಡ್‌ಗಳಲ್ಲಿ ವಿಶೇಷ ಅಕ್ಷರಗಳನ್ನು ಬಳಸುವುದು
- ✦ ಉಚಿತ ಸಾಫ್ಟ್‌ವೇರ್‌ಗಳನ್ನು ಡೌನ್‌ಲೋಡ್ ಮತ್ತು ಇನ್‌ಸ್ಟಾಲ್ ಮಾಡುವುದನ್ನು ನಿಲ್ಲಿಸುವುದು
- ✦ ಮಾಹಿತಿ ನೀಡುವ ಮೊದಲು ಫೇಕ್ ವೆಬ್‌ಸೈಟನ್ನು ಖಚಿತಪಡಿಸಿಕೊಳ್ಳುವುದು
- ✦ ಉಚಿತ ವೈಫೈ ಸೇವೆಯನ್ನು ಉಪಯೋಗಿಸುವಾಗ ಎಚ್ಚರವಿರಲಿ
- ✦ ಯಾವುದೇ ಕಾರಣಕ್ಕೂ ಪಿನ್ ನಂಬರ್‌ಗಳನ್ನು ಷೇರ್ ಮಾಡಬಾರದು
- ✦ ಆಂಟಿ ವೈರಸ್ ಸಾಫ್ಟ್‌ವೇರ್‌ಗಳನ್ನು ಬಳಸುವುದು
- ✦ ಸಂಸ್ಥೆಗಳಲ್ಲಿ ಫೈರ್‌ವಾಲ್ ಸಾಫ್ಟ್‌ವೇರ್‌ಗಳನ್ನು ಬಳಸುವುದು

ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಅಂತರ್ಜಾಲ ಹಾಗೂ ತಂತ್ರಜ್ಞಾನದ ಸಾಧನಗಳು ಎಷ್ಟು ಮುಖ್ಯವಾಗಿವೆಯೋ ಅಷ್ಟೇ ಮುಖ್ಯ ನಮ್ಮ ಹಾಗೂ ಸಾಧನಗಳಲ್ಲಿ ಇರುವ ಮಾಹಿತಿ ಮತ್ತು ಅದರ ಭದ್ರತೆ. ಅಂದ ಮಾತ್ರಕ್ಕೆ ಉಪಯೋಗಿಸುವುದನ್ನು ಬಿಡಲು ಅಸಾಧ್ಯದ ಮಾತು. ಆದರೆ ಭದ್ರತೆಗಾಗಿ ಮೇಲೆ ತಿಳಿಸಿರುವ ಕೆಲವು ಮಾರ್ಗಸೂಚಿಗಳನ್ನು ಅನುಸರಿಸಲೇಬೇಕು ಇಲ್ಲವಾದಲ್ಲಿ ಸರಿಪಡಿಸಲಾಗದ ತೊಂದರೆ ಖಚಿತ, ಎಚ್ಚರ.



**- ಡಾ. ಮೌನೇಶಚಾರಿ,**
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಗಣಕ ಯಂತ್ರ ವಿಭಾಗ, ಜೈನ್ ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ.

## ಚಂಡಮಾರುತದ ಅಟ್ಟಹಾಸದ ಆರ್ಭಟ

ಜಲ ಜಲ ಜಲ ಜಲರಾಶಿ ತುಂಬಿಹುದು
ಜಲಪ್ರಳಯ ಬೆಚ್ಚಿಸಿ ನಡುಗಿಸಿಹುದು
ಎಲ್ಲೆಲ್ಲೂ ನೀರಿನ ಕಾಲುವೆ ಹರಿದಿಹುದು
ಎಲ್ಲೆ ಇಲ್ಲದ ಕಷ್ಟ ಇಲ್ಲಿ ಬಂದಿಹುದು

ಚಂಡಮಾರುತದ ರೌದ್ರ ತಾಂಡವವು
ಕಂಡರಿಯದ ಮಳೆಯ ಕೆಟ್ಟ ಆರ್ಭಟವು
ಒಂದೇ ದಿನ ತುಂಬಿಸಿದೆ ಎಲ್ಲಾ ಜಾಗವನು
ಬಂಧಿಸುತ ಎಲ್ಲರನು ಹರಿಯುತಿದೆ ತಾನು

ದೂರವಾಣಿಯು ಇಲ್ಲ ದೂರದರ್ಶನವಿಲ್ಲ
ಪರದಾಟ ಕಷ್ಟಕ್ಕೆ ಕೊನೆಮೊದಲೆ ಇಲ್ಲ
ಕರೆಮಾಡಿ ಕ್ಷೇಮ ವಿಚಾರಿಸಲು ಸಾಧ್ಯವಿಲ್ಲ
ಸರಸರ ಹೋಗಿ ನೋಡಲು ರಸ್ತೆ ರೈಲು ಇಲ್ಲ

ನೋಡಿ ತಿಳಿದಿದ್ದರೂ ಹೀಗೇಕಾಯಿತು?
ಬಡಿದೆಬ್ಬಿಸಲು ಪ್ರಕೃತಿ ವಿಕೋಪಕೆದ್ದಿತೆ?
ಕಡಿದು ರೊಂಬೆಗಳನು ಕೆರೆಯ ಮುಚ್ಚುವ ಜನರಿಗೆ
ಬಿಡದೆ ಪಾಠವ ಕಲಿಸತಿದೆಯೆ ಹೀಗೆ?

ಸಿರಿಹರಿಯ ಕೃಪೆಯಿಂದ ಎಲ್ಲಾ ಸರಿಯಾಗಲಿ
ಪರಿಪರಿಯ ಕಷ್ಟ ಮಂಜಿನಂತೆ ಕರಗಲಿ
ಸರಿಯಾವುದೆಂಬ ಅರಿವು ನಮಗಾಗಲಿ
ಪರಿಪೂರ್ಣ ಪ್ರಕೃತಿಯ ರಕ್ಷಣೆಯಾಗಲಿ

**- ಶ್ರೀ ಕೃಷ್ಣಾರ್ಪಣಮಸ್ತು ರೂಪಶ್ರೀ ಶಶಿಕಾಂತ್**

## ಜಿಗಳಿಯಲ್ಲಿ ಇಂದು ಗ್ರಾಮ ಸಭೆ

ಜಿಗಳಿ ಗ್ರಾ.ಪಂ ಕಛೇರಿ ಆವರಣದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಉದ್ಯೋಗ ಖಾತ್ರಿ ಯೋಜನೆಯ 15ನೇ ಹಣಕಾಸು ಯೋಜನೆಯ ಸಾಮಾಜಿಕ ಪರಿಶೋಧನೆಯ ಗ್ರಾಮ ಸಭೆಯನ್ನು ಜಿ.ಪಂ. ಸಿಇಓ ಸುರೇಶ್ ಬಿ.ಇಟ್ನಾಳ್ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ವೈ. ಚೇತನ್ ಕುಮಾರ್, ತಾ.ಪಂ. ಇಓ ರಾಮಕೃಷ್ಣಪ್ಪ, ತಾ.ಪಂ. ಸಹಾಯಕ ನಿರ್ದೇಶಕ ಜಿ.ಆರ್. ಸುನೀಲ್, ಜಿ.ಪಂ. ಎಇಇ ಬಿ.ಕೆ. ಗಿರೀಶ್ ಸೇರಿದಂತೆ ಇನ್ನಿತರರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆಂದು ಪಿಡಿಓ ಕೆ.ಎಸ್. ಉಮೇಶ್ ತಿಳಿಸಿದ್ದಾರೆ.

## ಹೊನ್ನಾಳಿ : ಕ್ಯಾಂಡಲ್ ಹಚ್ಚಿ ಪರಿನಿರ್ವಾಣ ದಿನಾಚರಣೆ



ಹೊನ್ನಾಳಿ, ಡಿ. 6 - ದೇಶದ ಪ್ರಥಮ ಕಾನೂನು ಸಚಿವರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾಜಕ್ಕೆ ನೀಡಿದ ಕೊಡುಗೆ ಸಾಧನೆಯನ್ನು ಅವರು ನಿಧನ ಹೊಂದಿದ ಈ ದಿನ ಸ್ಮರಿಸುವ ನಿಟ್ಟಿನಲ್ಲಿ ಮಹಾಪರಿ ನಿರ್ವಾಣ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ಪ್ರಜಾಪರಿವರ್ತನಾ ವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ಎ.ಡಿ. ಈಶ್ವರಪ್ಪ ಹೇಳಿದರು.

ಪ್ರಜಾಪರಿವರ್ತನಾ ವೇದಿಕೆ ವತಿಯಿಂದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಕ್ಯಾಂಡಲ್ ಹಚ್ಚುವ ಮೂಲಕ ಅಂಬೇಡ್ಕರ್ ರವರ ಮಹಾಪರಿನಿರ್ವಾಣ ದಿನದ ಕುರಿತು ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ, ವಿಶ್ವಜ್ಞಾನಿ, ಭಾರತ ರತ್ನ ಅಂಬೇಡ್ಕರ್ ಅವರನ್ನು ಕೇವಲ ಪ್ರತಿಮೆ ನಿರ್ಮಾಣ, ಸರ್ಕಲ್‌ಗಳ ರಚನೆ, ಜಯಂತಿ ಆಚರಣೆಗೆ ಸೀಮಿತಿಗೊಳಿಸದೇ ಅವರ ಆಚಾರ-ವಿಚಾರಗಳ ಮಹತ್ವ ಅರಿಯಬೇಕಿದೆ ಎಂದರು.

ಪ್ರಜಾಪರಿವರ್ತನಾ ವೇದಿಕೆಯಿಂದ ಬರುವ ದಿನಗಳಲ್ಲಿ 'ಅಂಬೇಡ್ಕರ್ ಅಭಿಮಾನಿಗಳ ಮನೆಯಲ್ಲಿ ಭಾವಚಿತ್ರ, ಮನದಲ್ಲಿ ಅಂಬೇಡ್ಕರ್' ಎಂಬ ಭಾವನೆ ಮೂಡಿಸಲು ಅನೇಕ ರೀತಿಯ ಕಾರ್ಯಯೋಜನೆಗೆ ಪಣ ತೊಟ್ಟಿದ್ದು ಅಂಬೇಡ್ಕರ್ ಅಭಿಮಾನಿಗಳು ಕತ್ತಲಿನಿಂದ ಬೆಳಕಿನವರೆಗೆ ಸಾಗುವ ಕಾರ್ಯ ಯಶಸ್ವಿಗೊಳಿಸಲು ಸಹಕರಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣ ಅರಕೆರೆ, ಕಾರ್ಯದರ್ಶಿ ಲೋಕೇಶ್, ಸಿದ್ದಪ್ಪ ಸಿಂಗಟಗೆರೆ, ಸಾಸ್ವೆಹಳ್ಳಿ ಅಧ್ಯಕ್ಷ ಶಿವಮೂರ್ತಿ, ನ್ಯಾಮತಿ ಅಧ್ಯಕ್ಷ ಜಗದೀಶ್, ಹುರಳಹಳ್ಳಿ ಮಹೇಶ, ನಾಗರಾಜ್, ಕಲ್ಕೇರಿ ನಾಗಣ್ಣ, ಮಹಿಳಾ ಪದಾಧಿಕಾರಿಗಳಾದ ಸಿಂಗಟಗೆರೆ ಗೌರಮ್ಮ, ಕುರುವ ಮಮತ, ದೊಡ್ಡೇರಹಳ್ಳಿ ಸವಿತ, ಹರಳಹಳ್ಳಿ ರೇಖಾ ಇನ್ನಿತರರಿದ್ದರು.

## ಹರಪನಹಳ್ಳಿ : ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ವಿಶ್ವಾಸ



ಹರಪನಹಳ್ಳಿ, ಡಿ.6- ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಈ ಹಿಂದೆ ನಮ್ಮ ತಂದೆಯವರು ಸಂಸದರಾಗಿ ಮೂರು ಬಾರಿ ಆಯ್ಕೆಯಾಗಿ ಈ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡುವ ಮೂಲಕ ಜನಪರಿಚಿತರಾಗಿದ್ದು, ಇಂದು ಅವರ ದಾರಿಯಲ್ಲಿ ನಾನು ಸಾಗುತ್ತಿದ್ದೇನೆ ಎಂದು ಶಿವಕುಮಾರ ಒಡೆಯರ್ ತಿಳಿಸಿದರು.

ಈ ಕುರಿತು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿ ಕೇಂದ್ರದಲ್ಲಿ ನರೇಂದ್ರ ಮೋದಿಯವರ ಎಷ್ಟೇ ಗಾಳಿ ಬಿಸಿದರೂ ಫಲಿಸದು, ರಾಜ್ಯದಲ್ಲಿ ಈಗಾಗಲೇ ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರ್ಕಾರ ಗಟ್ಟಿಯಾಗಿದ್ದು, ಕೇಂದ್ರದಲ್ಲಿ ಸಹ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮುಖಂಡರಾದ ಚಂದ್ರಶೇಖರ ಒಡೆಯರ್, ಮಹಾಸ್ವಾಮಿ, ನಿಂಗಪ್ಪ, ಸಂತೋಷ್, ಬಾಗಳಿ ರಮೇಶ್ ಉಪಸ್ಥಿತರಿದ್ದರು.

## ಡಿಕೆಶಿ ಪ್ರಕರಣ : ಹೈಕೋರ್ಟ್‌ನಲ್ಲಿ ಯತ್ನಾಳ್ ಅರ್ಜಿ

ಬೆಂಗಳೂರು, ಡಿ. 6 – ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಸಿ.ಬಿ.ಐ. ಕ್ರಮಕ್ಕಾಗಿ ರಾಜ್ಯ ಸರ್ಕಾರ ನೀಡಿದ ಅನುಮತಿ ವಾಪಸ್ ಪಡೆದಿದ್ದನ್ನು ಪ್ರಶ್ನಿಸಿ ಬಿಜೆಪಿ ನಾಯಕ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಈ ಬಗ್ಗೆ ಪರಿಶೀಲಿಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ನೇತೃತ್ವದ ಪೀಠ, ಮೊದಲು ಅರ್ಜಿಯ ಸ್ವೀಕಾರಾರ್ಹತೆಯ ಬಗ್ಗೆ ನಿರ್ಧರಿಸುವುದಾಗಿ ತಿಳಿಸಿದೆ. ನಂತರ ವಿಚಾರಣೆ ಮುಂದೂಡಲಾಗಿದೆ.

ಕಳೆದ ನವೆಂಬರ್ 28ರಂದು ಸಿ.ಬಿ.ಐ. ಪ್ರಕರಣಕ್ಕೆ ನೀಡಲಾಗಿದ್ದ ಅನುಮತಿಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ವಾಪಸ್ ಪಡೆದಿತ್ತು.

ಈ ನಿರ್ಧಾರವನ್ನು ಪ್ರಶ್ನಿಸಿರುವ ಯತ್ನಾಳ್, ಸುಪ್ರೀಂ ಕೋರ್ಟ್ ತೀರ್ಪು ನೆಲದ ಕಾನೂನಾಗಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ನೇರವಾಗಿ ಪ್ರಶ್ನಿಸುವ ರೀತಿಯಲ್ಲಿ ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ ಎಂದಿದ್ದಾರೆ. ಆದಾಯ ತೆರಿಗೆ ಇಲಾಖೆಯ ದಾಳಿಗಳು ಹಾಗೂ ಜಾರಿ ನಿರ್ದೇಶನಾಲಯದ ತನಿಖೆ ಆಧರಿಸಿ ಶಿವಕುಮಾರ್ ವಿರುದ್ಧ ಎಫ್.ಐ.ಆರ್. ದಾಖಲಿಸಲು ಸಿಬಿಐ ರಾಜ್ಯ ಸರ್ಕಾರದ ಅನುಮತಿ ಕೋರಿತ್ತು. ಅದರಂತೆ ಸೆಪ್ಟೆಂಬರ್ 25, 2019ರಂದು ಆಗಿನ ಬಿಜೆಪಿ ಸರ್ಕಾರ ಅನುಮತಿ ನೀಡಿತ್ತು ಎಂದು ಯತ್ನಾಳ್ ಹೇಳಿದ್ದಾರೆ.

## ನಗರದಲ್ಲಿ ಉಚಿತ ದಂತ ತಪಾಸಣಾ ಶಿಬಿರ



ದಾವಣಗೆರೆ, ಡಿ.6- ವಿಶ್ವ ಅಂಗವಿಕಲರ ದಿನಾಚರಣೆ ದಿನದಂದು ನಗರದ ಸಂಕಲ್ಪ ಸಂಸ್ಥೆಯಲ್ಲಿ ಬಾಪೂಜಿ ದಂತ ಮಹಾವಿದ್ಯಾಲಯ ವತಿಯಿಂದ ಸಂಕಲ್ಪ ಸಂಸ್ಥೆಯ ಮಕ್ಕಳಿಗೆ ಉಚಿತ ದಂತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ ವೈದ್ಯರು ಮಕ್ಕಳಿಗೆ ಉಚಿತ ದಂತ ತಪಾಸಣೆ ಮಾಡಿದರು.

## ಖೋ-ಖೋ : ರಾಷ್ಟ್ರಮಟ್ಟಕ್ಕೆ ಸಂತಪೌಲರ ಕಾಲೇಜು ವಿದ್ಯಾರ್ಥಿನಿ ಗೀತಾಂಜಲಿ



ದಾವಣಗೆರೆ, ಡಿ.6- ನಗರದಲ್ಲಿ ಜರುಗಿದ ರಾಜ್ಯ ಮಟ್ಟದ ಖೋ-ಖೋ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸಂತಪೌಲರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಗೀತಾಂಜಲಿ ಕೆ.ಎಸ್ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಅಲ್ಲದೇ ಮೈಸೂರು ಜಿಲ್ಲೆಯಲ್ಲಿ ನಡೆದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಕಾಲೇಜಿನ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿನಿ ಆಯಿಷಾ ಸಿದ್ದೀಕ್ ತೃತೀಯ ಸ್ಥಾನವನ್ನು ಗಳಿಸಿರುತ್ತಾರೆ. ರಾಮನಗರದಲ್ಲಿ ನಡೆದ ಜ್ಯೂಡೋ ಸ್ಪರ್ಧೆಯಲ್ಲಿ ಕೃತಿ ಕೆ.ಯು 44ಕೆಜಿ ವಿಭಾಗದಲ್ಲಿ, ನಿಸರ್ಗ ಎನ್ 52 ಕೆಜಿ ವಿಭಾಗದಲ್ಲಿ, ಪವಿತ್ರ.ವಿ +70 ಕೆಜಿ ವಿಭಾಗದಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ ಹಾಗೂ ವೈಷ್ಣವಿ.ಕೆ.ಬಿ -57 ಕೆಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ವಿಜೇತರನ್ನು ಸಂಸ್ಥೆಯ ವ್ಯವಸ್ಥಾಪಕರಾದ ಸಿಸ್ಟರ್ ಮಾರ್ಜರಿ, ಆಡಳಿತಾಧಿಕಾರಿ ಸಿಸ್ಟರ್ ಆಲ್ಬಿನ, ಪ್ರಾಂಶುಪಾಲರಾದ ಸಿಸ್ಟರ್ ಸಮಂತಾ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ವೆನೀಸಾ, ಸಿಸ್ಟರ್ ಸುಪ್ರಿಯ, ಕಾಲೇಜಿನ ಪ್ರಾಚಾರ್ಯ ಮೇಘನಾಥ್ ಕೆ ಟಿ, ದೈಹಿಕ ಶಿಕ್ಷಕ ಸಿದ್ದೇಶ್ ಅಭಿನಂದಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ದಂತ ತಪಾಸಣೆ

ಜಾಮೀಯಾ ನ್ಯಾಷನಲ್ ಉರ್ದು ಪೌಢ ಹಾಗೂ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಯಿಂದ ಲಯನ್ಸ್ ಕ್ಲಬ್ (ಮಲೇಬೆನ್ನೂರು) ಮತ್ತು ದಾವಣಗೆರೆಯ ಬಾಪೂಜಿ ದಂತ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ವತಿಯಿಂದ ಉಚಿತ ದಂತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ತಿಳಿಸಿದ್ದಾರೆ.


**ಕೆಲಸಕ್ಕೆ ಬೇಕಾಗಿದ್ದಾರೆ**
ಕೆಫೆಯಲ್ಲಿ ಸರ್ವೀಸ್ ಮತ್ತು ವಾಷಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC Pass/Fail.
ವಯಸ್ಸು : 18 ರಿಂದ 28. ಸಂಪರ್ಕಿಸಿ.
93804 69079

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಭೇಟಿಯ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ.
ಸಂಪರ್ಕಿಸಿ:
08192 254736

**ಶಿರ್ಕೆ ಆರೋಗ್ಯ ಸೇವೆಗಳು**
ನಿಮ್ಮ ಆರೋಗ್ಯವೇ ನಮ್ಮ ಗುರಿ
ಇದೀಗ ದಾವಣಗೆರೆಯಲ್ಲಿ ನುರಿತ ಆರೈಕೆದಾರರಿಂದ ನಿಮ್ಮ ಮನೆಯಲ್ಲಿ ಕೈಗೆಟುಕುವ ಬೆಲೆಯಲ್ಲಿ ಸೇವೆ ಮನೆಯಲ್ಲಿ ಹಾಸಿಗೆ ಹಿಡಿದ ರೋಗಿಗಳಿಗೆ ಕಾಳಜಿ, ಮನೆಯಲ್ಲಿ ಹಿರಿಯರ ಕಾಳಜಿ, ಶಸ್ತ್ರಚಿಕಿತ್ಸೆ, ಸ್ಟ್ರೋಕ್‌ನಿಂದ ಚೇತರಿಸಿಕೊಳ್ಳುತ್ತಿರುವವರಿಗೆ ಕಾಳಜಿ.
ಸಂಪರ್ಕಿಸಿ : 74115 25369

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅಡುಗೆ ಭಟ್ಟರು ಬೇಕಾಗಿದ್ದಾರೆ.
(ಇಡ್ಲಿ, ವಡಾ, ರೈಸ್ ಐಟಂ)
ಸಂಪರ್ಕಿಸಿ
81050 56583

**ಮನೆ ಬಾಡಿಗೆಗೆ ಇದೆ**
ವಿನೋಬನಗರ 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಶಂಭುಲಿಂಗ ಟೆಂಪಲ್ ಎದುರು ಮೊದಲನೇ ಮಹಡಿಯಲ್ಲಿ, 2 ಬೆಡ್ ರೂಂ ಮುನ್ಸಿಪಲ್ ಹಾಗೂ ಬೋರ್ ವೆಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
98804 38541, 89041 34197

**ಬೇಕಾಗಿದ್ದಾರೆ**
ಫೀಲ್ಡ್ ಸರ್ವೀಸ್ ಟೆಕ್ನೀಷಿಯನ್ ವಿದ್ಯಾರ್ಹತೆ : ಐಟಿಐ ಫಿಟ್ಟರ್, ಡಿಪ್ಲೋಮಾ ಇನ್ ಮೆಕ್ಯಾನಿಕಲ್, ಸ್ಯಾಲರಿ ನೆಗೋಸಿಯೇಬಲ್
ಸಂಪರ್ಕಿಸಿ : ಅನು ಏಜೆನ್ಸೀಸ್
ಕಾವೇರಿ ಫಾರ್ಮಾ ಎದುರು, ವಾಸವಿ ರೋಡ್, ಪ್ರಜಾವಾಣಿ, ಆಫೀಸ್ ಕೆಳಗೆ, ದಾವಣಗೆರೆ.
ಫೋ. : 98442 47494

**ಬೇಕಾಗಿದ್ದಾರೆ**
ಉಳಿತಾಯ ಸಂಘದ ಪ್ರಮೋಷನ್‌ಗಾಗಿ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಪಾರ್ಟ್-ಟೈಮ್ ಫುಲ್-ಟೈಮ್
97401 66884
99861 49737

**ಬೇಕಾಗಿದ್ದಾರೆ**
ಆಟೋ ಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಬೇಕಾಗಿದ್ದಾರೆ**
ಮಗುವಿನ ಆರೈಕೆ ಮಾಡುವ ಕೆಲಸಕ್ಕೆ ಸ್ತ್ರೀಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
99865 99923
91642 56425

**ಅನುದಾನ ಪಡೆಯುತ್ತಿರುವ ಸಂಘ ಹಸ್ತಾಂತರಕ್ಕಿದೆ**
ಈಗಾಗಲೇ ಅನುದಾನ ಪಡೆಯುತ್ತಿರುವ ಸಂಘವು ಹಸ್ತಾಂತರಕ್ಕಿದೆ.
ಇಚ್ಛೆಯುಳ್ಳವರು ಸಂಪರ್ಕಿಸಿ.
97425 98520

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ದಾವಣಗೆರೆ-2.
Only officials
97405 69252

**COSDERM HAIR & SKIN CARE WELLNESS CENTRE DAVANAGERE**
**URGENTLY STAFF REQUIRED**
Counsellor, Marketing manager, Nurse's, Therapist (Male, Female), House keeping (Male, Female), Dietitian
for more information
76192-57443, 81975-72499

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ
(Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96326 11005

**ಬೇಕಾಗಿದ್ದಾರೆ**
ಅಕೌಂಟೆಂಟ್ ಮ್ಯಾನೇಜರ್, ಸೇಲ್ಸ್ ಸ್ಟಾಫ್, ಗೋಡೌನ್ ಸ್ಟಾಫ್
ಸಮ್ಯಕ್ ಸೆರಾಮಿಕ್ಸ್
ಹದಡಿ ರೋಡ್, ದಾವಣಗೆರೆ.
96200 95520, 80888 92673

**ಮನೆ ಬಾಡಿಗೆಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ
2BHK, 2ನೇ ಮೇನ್, 15ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ. ಸಂಪರ್ಕಿಸಿ :
98444 99943

**PART TIME JOBS**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೊರಿಯರ್ ಸೌಲಭ್ಯವಿದೆ)
87490 98879

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ಇಂದು ದಿನಾಂಕ 7.12.2023ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
97436 54365
86609 98651

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED SALESMEN FOR REPUTED COMPANY**
Experience in TV, MOBILE, WATCHES, ACCESSORIES SALES
Preferred Davangere Candidates
JAIN ENTERPRISES
6/2, Chowkipet cross, Chigteri Galli, Opp: AXIS Bank ATM, Davangere- 577001 Karnataka .
98445 55551

**LOOKING FOR COMPUTER BILLING**
Tally certification is a must !
97429 12258
Gender: Male

**Site For Sale**
30x40 North West Corner, Behind SS Hi-Tech Hospital, Davangere.
96069 04902

**ಬೇಕಾಗಿದ್ದಾರೆ**
ಗೋಬಿ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಮಯ : ಸಂಜೆ 5 ರಿಂದ 10
89514 75488
78921 94588

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, B.COM ಆದ ಮಹಿಳೆಯರು ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ ದಾವಣಗೆರೆ.

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಶ್ರೀ ಸಾಯಿಬಾಬಾ ಬೋರ್‌ವೆಲ್**
350ರಿಂದ 450ರ ವರೆಗೂ ಕೊರೆಯಬಹುದು. ಮನೆ ಒಳಗೆ / ಮನೆ ಹೊರಗೆ. ದಾವಣಗೆರೆ.
99640 78484, 95906 15776

**ಕಮರ್ಷಿಯಲ್ ಬಳಕೆಗೆ ಮನೆ ಬಾಡಿಗೆಗೆ / ಲೀಸ್‌ಗೆ ಇದೆ**
ಸರಸ್ವತಿ ನಗರ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಮನೆ, ಆಫೀಸ್, ಕ್ಲಿನಿಕ್, ಸರ್ವೀಸ್ ಸೆಂಟರ್ ಇನ್ನಿತರೆ ಕಮರ್ಷಿಯಲ್ ಬಳಕೆಗೆ ಬಾಡಿಗೆ / ಲೀಸ್‌ಗೆ ಇರುತ್ತದೆ. ಸಂಪರ್ಕಿಸಿ.
98444 97008, 63638 41943

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪೀಂಗ್ ಮತ್ತು ಹೇರ್ ಸ್ಟೈಲ್, ಮೇಕಪ್ ಕಲಿಕೆಗೆ ಪ್ರಾಡಕ್ಟ್‌ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio
ಗಿರೀಜ - ಮೇಕಪ್ ಆರ್ಟಿಸ್ಟ್
94817 76305

**WANTED**
* Salesman * Sales Girls * Helpers
Contact : Gangavathi Silk Saree Center
Binny Company Road, Davangere - 577001

**ಮನೆ ಬಾಡಿಗೆಗೆ ಇದೆ**
2 BHK ಮನೆ (first Floor) ಮನೆ ನಂ. 1949/63, 20ನೇ ಕ್ರಾಸ್ ವಿದ್ಯಾನಗರದಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ :
99003 00811

**WANTED**
Freshers for Auditor Office (Ladies Only)
77607 40760

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

# ಜಗಳೂರು : 23ರಂದು ಉದ್ಯೋಗ ಮೇಳ



ಜಗಳೂರು, ಡಿ. 6 - ಮಾಜಿ ಸಂಸದ ಜಿ. ಮಲ್ಲಿಕಾರ್ಜುನಪ್ಪ ಮತ್ತು ಹಾಲಮ್ಮ ಚಾರಿಟಿ ಫೌಂಡೇಶನ್ ವತಿಯಿಂದ ಇದೇ ದಿನಾಂಕ 23 ರ ಶನಿವಾರ ಪಟ್ಟಣದ ನಳಂದಾ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ವಿವಿಧ ಗಣ್ಯರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಇದು ಎಂಪಿ ಎಲೆಕ್ಷನ್ ಚುನಾವಣೆ ಗಿಮಿಕ್ ಅಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ. ಜಿ.ಎಂ. ಸಿದ್ದೇಶ್ವರ ಅವರು ಆಯೋಜನೆ ಮಾಡಿದ್ದಾರೆ ಎಂದು ಹೇಳಿದರು.

ಹಿಂದುಳಿದ ಜಗಳೂರು ತಾಲ್ಲೂಕಿನಲ್ಲಿ ಮಾನವ ಸಂಪನ್ಮೂಲ ಅಧಿಕವಾಗಿದ್ದು, ಅತಿ ಹೆಚ್ಚು ಪದವಿ ಪಡೆದ ಯುವಕ-ಯುವತಿಯರಿದ್ದಾರೆ. ವಿದ್ಯಾಭ್ಯಾಸ ಮುಗಿಸಿ ಹೊರ ಬಂದಿರುವ ಯುವಕರಿಗೆ ಉದ್ಯೋಗ ಅವಕಾಶಗಳ ಮಹಾಪೂರವೇ ಹರಿಯಲಿದೆ. 10ನೇ ತರಗತಿ ಪಾಸ್ ಆದ ವಿದ್ಯಾರ್ಥಿಗಳಿಂದ ಸ್ನಾತಕೋತ್ತರ, ಎಂಬಿಎ, ಎಂಜಿನಿಯರಿಂಗ್ (ಎಲೆಕ್ಟ್ರಾನಿಕ್, ಮೆಕಾನಿಕಲ್, ಕೆಮಿಕಲ್), ಡಿಪ್ಲಮಾ, ಐಟಿಐ ಸೇರಿದಂತೆ ಕೌಶಲ್ಯ ಆಧಾರಿತ ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ಸಾಕಷ್ಟು ಉದ್ಯೋಗ ಅವಕಾಶಗಳು ಲಭ್ಯವಾಗಲಿದೆ ಎಂದು ಜಿ.ಎಂ. ವಿವಿಯ ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ಪ್ರೊ. ತೇಜಸ್ವಿ ಕಟ್ಟಿಮನಿ ತಿಳಿಸಿದರು.

ಈಗಾಗಲೇ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ 52 ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ. ನಳಂದಾ ಕಾಲೇಜ್ ಆವರಣದಲ್ಲಿ ಬೆಳಿಗ್ಗೆ 9ಗಂಟೆಗೆ ಉದ್ಯೋಗ ಮೇಳ ಆರಂಭಗಾಗಲಿದ್ದು ಆನ್‌ಲೈನ್ ನೋಂದಣಿ ಮತ್ತು ಸ್ಥಳದಲ್ಲೇ ನೋಂದಣಿಗೂ ಅವಕಾಶ ಕಲ್ಪಿಸಲಾಗಿದೆ. ಯಾವುದೇ ಶುಲ್ಕ ಪಾವತಿ ಅಗತ್ಯವಿಲ್ಲ. ಒಬ್ಬ ಅಭ್ಯರ್ಥಿಗೆ ನಾಲ್ಕು ಕಂಪನಿಗಳಲ್ಲಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದೆ.

10 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಹೊಂದಿದ್ದು ಆಯ್ಕೆಯಾದ ಅಭ್ಯರ್ಥಿಗೆ ಆರಂಭದಿಂದ ಕಂಪನಿಗಳಲ್ಲಿ ಉದ್ಯೋಗ ಕೊಡಿಸುವವರೆಗೂ ಚಾರಿಟಿ ಫೌಂಡೇಶನ್ ಜವಾಬ್ದಾರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಎಸ್. ಮಹೇಶ್, ಬಿಜೆಪಿ ಮುಖಂಡ ಶಿವಕುಮಾರ್ ಸ್ವಾಮಿ, ಪ.ಪಂ. ಸದಸ್ಯ ನವೀನ್, ಸತೀಶ್, ಸಿದ್ದಪ್ಪ ಪೂಜಾರಿ ಮುಂತಾದವರು ಇದ್ದರು.

# ಹಸಿರು ಎಲೆ ಪೇಪರ್ ಡ್ರೆಸ್‌ನ ಪ್ರತಿಭಾ ಲೋಕ



**ಮಲೇಬೆನ್ನೂರು**

ಮಲೇಬೆನ್ನೂರು, ಡಿ.6- ಒಡೆಯರ ಬಸವಾಪುರ ಗ್ರಾಪಂ ವ್ಯಾಪ್ತಿಯ ಪಟೇಲ್ ಬಸಪ್ಪ ಎಜುಕೇಶನ್ ಅಸೋಸಿಯೇಷನ್‌ನ ರಾಜ ರಾಜೇಶ್ವರಿ ವಿದ್ಯಾ ಸಂಸ್ಥೆ ವತಿಯಿಂದ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳ ಸೃಜನಶೀಲತೆ, ಕ್ರಿಯಾಶೀಲತೆಗೆ ಪ್ರೇರಣೆ ನೀಡುವ ಹಿನ್ನೆಲೆಯಲ್ಲಿ ಬಾಲಕರಿಗೆ ಹಸಿರು ಎಲೆಗಳ ಕಲಾತ್ಮಕ ಚಟುವಟಿಕೆ ಹಾಗೂ ಬಾಲಕಿಯರಿಗೆ ಪೇಪರ್ ಮೂಲಕ ಡ್ರೆಸ್ ಮೇಕಿಂಗ್ ಚಟುವಟಿಕೆ ನಡೆಸಲಾಯಿತು.

ತಮಗೆ ಕೊಟ್ಟ ಅವಧಿಯಲ್ಲಿ ಬಾಲಕರು ಎಲೆಗಳು ಮತ್ತು ಗರಿಗಳ ಮೂಲಕ ಎತ್ತಿನ ಗಾಡಿ, ಹೂ ಕುಂಡಲ, ಚಾಪೆ, ಮೊರ, ತೋರಣ, ವಿವಿಧ ಆಭರಣ, ಕಿರೀಟ ಇತ್ಯಾದಿ ರಚಿಸಿ ಕಲಾ ಪ್ರತಿಭೆ ಮೆರೆದರು.

ಪ್ರೌಢಶಾಲಾ ಬಾಲಕಿಯರು ವಿಧವಿಧದ ಹಳೆಯ ಮತ್ತು ಹೊಸ ವಿನ್ಯಾಸದ ಉಡುಪುಗಳನ್ನು ಪೇಪರ್ ಕಟ್ಟಿಂಗ್ ಮೂಲಕ ತಯಾರಿಸಿ ಪ್ರಾಥಮಿಕ ವಿದ್ಯಾರ್ಥಿನಿಯರಿಗೆ ತೊಡಿಸಿ ಸಂಭ್ರಮಿಸಿದರು.

# ಮತ್ತೆ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ



ಹರಪನಹಳ್ಳಿ, ಡಿ.6- ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ ಸರ್ಕಾರ ಬಹುಮತದೊಂದಿಗೆ ಕೇಂದ್ರದಲ್ಲಿ ಸರ್ಕಾರ ರಚಿಸಲಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಾಜಿ ನಿರ್ದೇಶಕ ಆರುಂಡಿ ನಾಗರಾಜ್ ವಿಶ್ವಾಸ ವ್ಯಕ್ತಪಡಿಸಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ ರಾಷ್ಟ್ರದ ಜನತೆಗೆ ಕೊಡಮಾಡಿದ ಅನೇಕ ಜನಪರ ಯೋಜನೆಗಳಿಗೆ, ರಾಷ್ಟ್ರದ ಅಭಿವೃದ್ಧಿಗಾಗಿ ತೆಗೆದುಕೊಂಡ ದಿಟ್ಟ ಕ್ರಮಗಳೊಂದಿಗೆ ತನ್ನದೇ ಆದ ಛಾಪು ಮೂಡಿಸಿದೆ ಎಂದಿದ್ದಾರೆ.

# ವಿಶ್ವ ರೈತ ದಿನಾಚರಣೆ : 23 ರಂದು ರೈತರ ಮಹಾ ಅಧಿವೇಶನ

ದಾವಣಗೆರೆ, ಡಿ. 6- ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ ದ ಸಂಯುಕ್ತಾಶ್ರಯದಲ್ಲಿ ವಿಶ್ವ ರೈತ ದಿನಾಚರಣೆ ಅಂಗವಾಗಿ ಇದೇ ದಿನಾಂಕ 23 ರಂದು ಬೆಳಿಗ್ಗೆ 11 ಕ್ಕೆ ಬೆಂಗಳೂರಿನಲ್ಲಿ ರೈತರ ಮಹಾ ಅಧಿವೇಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾಯ್ದೆ, ರೈತರ ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಲು ಹಾಗೂ ರಾಷ್ಟ್ರೀಯ ರೈತ ಮುಖಂಡರ ಸಮ್ಮುಖದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ನೀಡಲಾಗುವುದು ಎಂದು ಹೇಳಿದರು.

ಕಳೆದ ಮೂರು ವರ್ಷಗಳಿಂದ ಅತೀವೃಷ್ಟಿ, ಪ್ರವಾಹ ಹಾನಿ, ಮಳೆ ಹಾನಿ, ಬರಗಾಲಕ್ಕೆ ತುತ್ತಾಗಿರುವ ರಾಜ್ಯದ ಎಲ್ಲಾ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಕೃಷಿ ಸಾಲ ಪಡೆದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉದ್ಯಮಿಗಳ 12 ಲಕ್ಷ ಕೋಟಿ ಸಾಲ ಮಾಡಿರುವ ಸರ್ಕಾರ ರೈತರ ಸಾಲವನ್ನು ಯಾವುದೇ ಕಾರಣ ಹೇಳದೇ ಮನ್ನಾ ಮಾಡಲೇಬೇಕಾಗಿದೆ ಎಂಬಿತರೇ ಬೇಡಿಕೆಗಳ ಮನವಿಯನ್ನು ಇದೇ ದಿನಾಂಕ 23 ರಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಭತ್ತ, ಕಬ್ಬು ಉತ್ಪಾದನೆ ಶೇ. 50 ರಷ್ಟು ಕಡಿಮೆಯಾಗಿರುವ ಕಾರಣ, ಭತ್ತ ಮಾರಾಟ ಮಾಡದೇ ಉಗ್ರಾಣಗಳಲ್ಲಿ ದಾಸ್ತಾನು ಮಾಡಿ ದಾಸ್ತಾನು ಚೀಟಿ ನೀಡಿದರೆ ಬ್ಯಾಂಕುಗಳಲ್ಲಿ ಶೇ. 75 ರಷ್ಟು ಮುಂಗಡ ಸಾಲ ಕೊಡುತ್ತೇವೆ. ಅದರ ಉಪಯೋಗ ಪಡೆದು ಬೆಲೆಯೇರಿಕೆ ಆದಾಗ ಮಾರಾಟ ಮಾಡಬಹುದು ಎಂದು ಸಲಹೆ ನೀಡಿದರು.

ಎಲ್ಲಾ ಕೃಷಿ ಉತ್ಪನ್ನಗಳಿಗೂ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು. ಸ್ವಾಮಿನಾಥನ್ ಆಯೋಗದ ವರದಿ ಅನ್ವಯ ಕನಿಷ್ಠ ಬೆಂಬಲ ನಿಗದಿಯಾಗಬೇಕು. ಪ್ರಧಾನಿಯವರು ರೈತರಿಗೆ ಭರವಸೆ ನೀಡಿದಂತೆ ಕೇಂದ್ರ ಸರ್ಕಾರ ಕೂಡಲೇ ಕಾನೂನು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಬರಗಾಲದಿಂದ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ಎಕರೆಗೆ ಕನಿಷ್ಠ 25 ಸಾವಿರ ರೂ. ಬಿಡುಗಡೆ ಮಾಡಬೇಕು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಎಫ್‌ಆರ್‌ಪಿಗೆ ಹೆಚ್ಚುವರಿಯಾಗಿ 300 ರಿಂದ 400 ಕಾರ್ಖಾನೆಗಳಿಗೆ ಸ್ವಯಂ ಘೋಷಣೆ ಮಾಡಿ ಕೊಡುತ್ತಿದ್ದಾರೆ. ಈ ಭಾಗದ ಕಾರ್ಖಾನೆ ರೈತರಿಗೆ ನ್ಯಾಯಯುತ ದರ ನೀಡುವಲ್ಲಿ ವಂಚಿಸಲಾಗುತ್ತಿದೆ ಎಂದರು.

**ಪಿಂಚಣಿ ಯೋಜನೆ ಜಾರಿಗೊಳಿಸಿ**

ದೇಶದ ಜನರಿಗೆ ಆಹಾರ ಉತ್ಪಾದಿಸುವ 60 ವರ್ಷ ದಾಟಿದ ಅನ್ನದಾತನಿಗೆ ತಿಂಗಳಿಗೆ 5 ಸಾವಿರ ರೂ. ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕೆಂದು ಕುರುಬೂರು ಶಾಂತಕುಮಾರ್ ಒತ್ತಾಯಿಸಿದರು.

ಕಬ್ಬು ಉತ್ಪಾದನೆ ಶೇ. 50 ರಷ್ಟು ಕಡಿಮೆಯಾಗಿದೆ. ಕಾರ್ಖಾನೆಗಳು ಪೈಪೋಟಿಯಲ್ಲಿ ಕಬ್ಬು ಖರೀದಿ ಮಾಡುತ್ತಿವೆ. ಈ ಜಿಲ್ಲೆಯ ಕಾರ್ಖಾನೆ ಎಫ್‌ಆರ್‌ಪಿ ದರ ಮಾತ್ರ ನೀಡುತ್ತಿರುವುದು ಅನ್ಯಾಯ. ಕೂಡಲೇ ಕನಿಷ್ಠ 300 ಹೆಚ್ಚುವರಿ ನೀಡಬೇಕು. ಇಲ್ಲದಿದ್ದರೆ ರೈತರು ಹೆಚ್ಚು ದರ ನೀಡುವ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುತ್ತಾರೆಂದು ಎಚ್ಚರಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ನೀಡು ಉಚಿತ ವಿದ್ಯುತ್ ತಪ್ಪಿಸಲು ವಿದ್ಯುತ್ ಖಾಸಗೀಕರಣ ನೀತಿಯನ್ನು ಕೇಂದ್ರ ಸರ್ಕಾರ ಕೈ ಬಿಡಬೇಕು. ಹಗಲು ವೇಳೆ ನಿರಂತರ 10 ತಾಸು ವಿದ್ಯುತ್ ಸರಬರಾಜು ಮಾಡಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ಬಲ್ಲೂರು ರವಿಕುಮಾರ್, ಅಂಜಿನಪ್ಪ ಪೂಜಾರ್, ಮುರುಗೇಂದ್ರಯ್ಯ, ಮಾಗಡಿ ಅಜ್ಜಪ್ಪ, ದೇವರಾಜ್, ಅಶೋಕ್, ತಿರುಮಲೇಶ್, ಪ್ರಾತಪ್, ಐಗೂರು ಶಿವಮೂರ್ತಿ, ಹೆಬ್ಬಾಳು ರಾಜಯೋಗಿ ಮತ್ತಿತರರಿದ್ದರು.

# ಕಲೆ ದೈವೀದತ್ತ, ವಯೋ ಮಿತಿಯಿಲ್ಲ



**ಪ್ರೊ.ಬಿ.ಡಿ.ಕುಂಬಾರ್**

ದಾವಣಗೆರೆ, ಡಿ.6- ಕಲೆ ದೈವೀದತ್ತವಾದುದು. ಕಲಾಭಿವ್ಯಕ್ತಿಗೆ ವಯೋಮಾನದ ಮಿತಿ ಎಂಬುದಿಲ್ಲ. ನಿರಂತರ ಅಭ್ಯಾಸದಲ್ಲಿದ್ದರೆ, ಕಲಾ ರಚನೆಯಲ್ಲಿ ಕಲಾವಿದರು ಸತತವಾಗಿ ತೊಡಗಿಕೊಂಡಿದ್ದರೆ ಮಾತ್ರ ಕಲಾ ಪ್ರತಿಭೆ ಪ್ರಬುದ್ಧತೆ ಪಡೆದುಕೊಳ್ಳುತ್ತದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಬಿ.ಡಿ.ಕುಂಬಾರ್ ಹೇಳಿದರು.

ದಾವಣಗೆರೆಯ ದೃಶ್ಯ ಕಲಾ ಮಹಾವಿದ್ಯಾಲಯದ ದೃಶ್ಯ ವಿಶ್ವ ಕಲಾ ಗ್ಯಾಲರಿಯಲ್ಲಿ ಇಂದಿನಿಂದ ಏರ್ಪಟ್ಟಿರುವ ದೃಶ್ಯಾನುಭವ 2023 ಶೀರ್ಷಿಕೆಯ ಚಿತ್ರ ಕಲೆ ಮತ್ತು ಅನ್ವಯಿಕ ಕಲಾ ವಿಭಾಗಗಳ ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳ ಸಮೂಹ ಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಾವಣಗೆರೆ ವಿವಿಯ ದೃಶ್ಯ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಪ್ರತಿಭೆ ಗುರುತರವಾದುದು. ಹಾಗಾಗಿ ಇಂದು ಕಲಾಕೃತಿಗಳನ್ನು ಪ್ರದರ್ಶಿಸುತ್ತಿರುವ ಈ ಮಹಾವಿದ್ಯಾಲಯದ ಸ್ನಾತಕೋತ್ತರ ಪದವಿಯ ಚಿತ್ರ ಕಲೆ ಹಾಗೂ ಅನ್ವಯಿಕ ಕಲಾ ವಿದ್ಯಾರ್ಥಿಗಳು ಕಲಾ ರಚನೆಯನ್ನು ಇಲ್ಲಿಗೇ ಮುಕ್ತಾಯಗೊಳಿಸದೇ, ಅದನ್ನು ಮುಂಬರುವ ದಿನಗಳಲ್ಲೂ ಮುಂದುವರೆಸಬೇಕು. ತನ್ಮೂಲಕ ಔದ್ಯೋಗಿಕ ಅವಕಾಶಗಳು ದೊರಕುವಂತೆ ಪ್ರಯತ್ನಶೀಲರಾಗಬೇಕು ಎಂದು ಕರೆ ನೀಡಿದರು.

ಪ್ರಾಚಾರ್ಯ ಡಾ.ಜೈರಾಜ ಚಿಕ್ಕ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಕಲಾಪ್ರದರ್ಶನ ಡಿಸೆಂಬರ್ 9ರವರೆಗೆ ಪ್ರತಿದಿನ ಬೆಳಿಗ್ಗೆ 10.30ರಿಂದ ಸಂಜೆ 6ಗಂಟೆವರೆಗೆ ನಡೆಯಲಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ದಾವಣಗೆರೆಯ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಡಾ.ರಾಘವೇಂದ್ರ ಪ್ರಸಾದ್, ಡಾ. ರವೀಂದ್ರ ಎಸ್.ಕಮ್ಮಾರ್, ಬೋಧನಾ ಸಹಾಯಕರಾದ ಶಿವಶಂಕರ್ ಸುತಾರ್, ದತ್ತಾತ್ರೇಯ ಎನ್.ಭಟ್ಟ, ಡಾ.ಸಂತೋಷ್‌ಕುಮಾರ್ ಕುಲಕರ್ಣಿ, ಡಾ.ಗಿರೀಶ್‌ಕುಮಾರ್, ಎಸ್.ಹೆಚ್. ಹರೀಶ್, ಕೆ.ವಿ.ಪ್ರಮೋದ್, ಡಿ.ಹೆಚ್. ಸುರೇಶ್, ರಂಗನಾಥ್ ಕುಲಕರ್ಣಿ, ನವೀನ್‌ಕುಮಾರ್, ಅರುಣ್ ಕಮ್ಮಾರ್, ನಂದಕುಮಾರ್, ಶಿವಕುಮಾರ್ ಅಜಗಣ್ಣವರ್, ರೇವಣಸಿದ್ದಪ್ಪ, ಮಹಾಲಿಂಗಪ್ಪ ಇತರರು ಇದ್ದರು.

## ಹೆಚ್ಚು ಮಕ್ಕಳ ಮಾಡಿಕೊಳ್ಳಿ ಎಂದು ಕಣ್ಣೀರಿಟ್ಟ ಕೊರಿಯಾ ನಾಯಕ


ನವದೆಹಲಿ, ಡಿ. 6 – ದೇಶದ ಮಹಿಳೆಯರು ಹೆಚ್ಚು ಮಕ್ಕಳನ್ನು ಹೊಂದುವಂತೆ ಉತ್ತರ ಕೊರಿಯಾದ ಸರ್ವೋಚ್ಚ ನಾಯಕ ಕಿಮ್ ಜಾಂಗ್ ಉನ್ ಅವರು ಕಣ್ಣೀರಿಡುತ್ತಾ ಭಾವುಕರಾಗಿ ಕರೆ ನೀಡಿರುವ ವಿಡಿಯೋ ವೈರಲ್ ಆಗಿದೆ.

ಜನನ ದರ ಕುಸಿತ ತಡೆಯಬೇಕಿದೆ. ನಮ್ಮ ಎಲ್ಲ ಮನೆಗಳಿಗೆ ಉತ್ತಮ ಮಕ್ಕಳ ಕಾಳಜಿ ಸೇವೆ ಒದಗಿಸುವುದು ಕರ್ತವ್ಯವಾಗಿದೆ ಎಂದು ಕಿಮ್ ಹೇಳಿದ್ದಾರೆ.

ಉತ್ತರ ಕೊರಿಯಾದಲ್ಲಿ ಈಗ ಮಕ್ಕಳ ಜನನ ಪ್ರಮಾಣ 1.8ರಷ್ಟಿದೆ ಎಂದು ವಿಶ್ವ ಸಂಸ್ಥೆಯ ಜನಸಂಖ್ಯಾ ನಿಧಿ ಅಂದಾಜಿಸಿದೆ. ಇತ್ತೀಚಿನ ದಶಕಗಳಲ್ಲಿ ದೇಶದಲ್ಲಿ ಜನನ ದರ ಕುಸಿಯುತ್ತಿದೆ.

ಉತ್ತರ ಕೊರಿಯಾದ ಜನಸಂಖ್ಯೆ 2.5 ಕೋಟಿ ಆಗಿದೆ. ಇತ್ತೀಚಿನ ದಶಕಗಳಲ್ಲಿ ದೇಶದಲ್ಲಿ ಗಂಭೀರ ಆಹಾರದ ಕೊರತೆ ಉಂಟಾಗಿದೆ. 1990ರ ದಶಕದಲ್ಲಿ ತೀವ್ರ ಕ್ಷಾಮ ಸಹ ಉಂಟಾಗಿತ್ತು.

# ನಗರದ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇಂದು ಕಾರ್ತಿಕೋತ್ಸವ



ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

ಕಾರ್ತಿಕೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, ಬೆಳಿಗ್ಗೆ 8ಕ್ಕೆ ಆರತಿ, ಬೆಳಿಗ್ಗೆ 8.30ರಿಂದ ಲಲಿತ ಸಹಸ್ರ ನಾಮಾವಳಿ, ವಿಷ್ಣು ಸಹಸ್ರ ನಾಮಾವಳಿ, ಬೆಳಿಗ್ಗೆ 10.30ರಿಂದ ಸಾಯಿ ಭಜನಾಮೃತ - ಶ್ರೀ ಶಿರಡಿ ಸಾಯಿಬಾಬಾ ಭಜನಾ ಮಂಡಳಿಯಿಂದ ಸಾಯಿ ಭಜನೆ, ಮಧ್ಯಾಹ್ನ 12ಕ್ಕೆ ಆರತಿ, ಪ್ರಸಾದ ಕಾರ್ಯಕ್ರಮ, ಸಂಜೆ 6 ಗಂಟೆಗೆ ದೂಪಾರತಿ, ಪ್ರಸಾದ ವಿನಿಯೋಗ, ದುನಿ ಪೂಜೆ, ರಾತ್ರಿ 9ಕ್ಕೆ ಶೇಜಾರತಿ ಕಾರ್ಯಕ್ರಮಗಳು ಜರುಗಲಿವೆ.

ಶ್ರೀ ಸಾಯಿ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಕಾರ್ಯಾಧ್ಯಕ್ಷ ಎಸ್.ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿರುವರು.

# ಕರಾಟೆ ಚಾಂಪಿಯನ್ ಶಿಪ್ ನಲ್ಲಿ ಎಂ.ಎ.ಎಸ್. ಶಾಲೆಯ ಮಕ್ಕಳ ಸಾಧನೆ



ದಾವಣಗೆರೆ, ಡಿ.6- ಶಿವಮೊಗ್ಗದ ನೆಹರು ಕ್ರೀಡಾಂಗಣದಲ್ಲಿ ಇತ್ತೀಚಿಗೆ ನಡೆದ ಮಹಾತ್ಮಗಾಂಧಿ ಸ್ಮರಣಾರ್ಥ ನ್ಯಾಷನಲ್ ಲೆವೆಲ್ ಓಪನ್ ಕರಾಟೆ ಚಾಂಪಿಯನ್ ಶಿಪ್ - 2023ರಲ್ಲಿ ನಗರದ ಎಂ.ಎ.ಎಸ್. ಶಾಲೆಯ ಕರಾಟೆ ಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಬಹುಮಾನಗಳನ್ನು ಪಡೆದಿದ್ದಾರೆ. ಕುಮಟೆ ವಿಭಾಗದಲ್ಲಿ ಎಂ.ಎ.ಎಸ್. ಶಾಲೆಯ ಯಶವಂತ್ ವೈ. ಎಸ್. ಪ್ರಥಮ ಸ್ಥಾನ, ಕಟಾ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪುರುಷೋತ್ತಮ್ ವೈ.ಎಸ್. ಕಟಾ ವಿಭಾಗದಲ್ಲಿ ಪ್ರಥಮ ಸ್ಥಾನ, ಲಾವಣ್ಯ ಜೆ. ಕಟಾ ವಿಭಾಗದಲ್ಲಿ ಪ್ರಥಮ ಸ್ಥಾನ, ಕಿರಣ ಎಲ್.ಕೆ. ಕಟಾ ವಿಭಾಗದಲ್ಲಿ ದ್ವಿತೀಯ ಸ್ಥಾನ, ಹೇಮಂತ್ ಕೆ.ಎಸ್. ಕಟಾ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಕರಾಟೆ ತರಬೇತುದಾರ ಎಂ. ರಾಜು ತಿಳಿಸಿದ್ದಾರೆ.

# ವಕೀಲ ಪ್ರೀತಮ್ ಮೇಲೆ ಹಲ್ಲೆ : ಪೊಲೀಸರ ವಿರುದ್ಧ ನ್ಯಾಯಾಂಗ ತನಿಖೆಗೆ ವಕೀಲರ ಆಗ್ರಹ



ದಾವಣಗೆರೆ, ಡಿ.6- ಚಿಕ್ಕಮಗಳೂರಿನಲ್ಲಿ ವಕೀಲ ಪ್ರೀತಮ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಪೊಲೀಸರ ವಿರುದ್ಧ ನ್ಯಾಯಾಂಗ ತನಿಖೆಗೆ ಆಗ್ರಹಿಸಿ, ವಕೀಲರ ಸಂಘವು ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಿತು. ಜಿಲ್ಲಾ ನ್ಯಾಯಾಲಯದ ಆವರಣದಿಂದ ಪ್ರತಿಭಟನೆ ಹಾಗೂ ಮಾನವ ಸರಪಳಿ ರಚಿಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಕೀಲರ ಮೇಲಿನ ಮಾರಣಾಂತಿಕ ಹಲ್ಲೆಯನ್ನು ಜಿಲ್ಲಾ ವಕೀಲರ ಸಂಘವು ಖಂಡಿಸಿದ್ದು, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿತು. ಗೃಹ ಸಚಿವರು ಮುಷ್ಕರ ನಡೆಸಿದ ಪೊಲೀಸರ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡು ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕು ಎಂದು ಆಗ್ರಹಿಸಲಾಯಿತು.

ಪ್ರಜಾಪ್ರಭುತ್ವದ ಹಾಗೂ ನ್ಯಾಯಾಂಗ ರಕ್ಷಿಸುವ ನ್ಯಾಯವಾದಿಗಳ ಮೇಲೆ ಪೊಲೀಸರು ಹಲ್ಲೆ ನಡೆಸಿರುವುದು ಅತ್ಯಂತ ಅಮಾನೀಯವಾಗಿದ್ದು, ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿತು.

ಪ್ರತಿಭಟನೆಯಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣ್‌ಕುಮಾರ್, ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್.ಬಸವರಾಜ್, ಸಹ ಕಾರ್ಯದರ್ಶಿ ಎ. ಎಸ್.ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ್ ಕಟಿಗಿಹಳ್ಳಿಮಠ್, ಅಜ್ಜಯ್ಯ ಬಿ., ಚೌಡಪ್ಪ, ಎಂ. ನಾಗರಾಜ್, ನೀಲಕಂಠಯ್ಯ ಕೆ.ಎಂ., ರಾಘವೇಂದ್ರ ಎಂ., ಸಂತೋಷ್‌ಕುಮಾರ್ ಜಿ.ಜೆ., ಮಧುಸೂಧನ್, ವಕೀಲ ಡಿ.ವಿಜಯಪ್ರಕಾಶ್, ಡಿ.ಪಿ. ಬಸವರಾಜ್, ಹೆಚ್.ಎಸ್.ಯೋಗೇಶ್, ಗುಮ್ಮನೂರು ಮಲ್ಲಿಕಾರ್ಜುನ್, ಎಸ್. ಪರಮೇಶ್, ಯು.ಜಿ.ಪಾಟೀಲ್, ಎಲ್.ಹೆಚ್. ಪ್ರದೀಪ್, ಎ.ಎಸ್.ರಾಘವೇಂದ್ರ, ಹೆಚ್. ದಿವಾಕರ್, ರಾಜಾರಾಮ್, ಚಂದ್ರಶೇಖರ್, ಕೆ.ಜಿ.ಕೆ.ಸ್ವಾಮಿ, ಅನಿಷ್ ಪಾಷಾ, ಜಯಲಕ್ಷ್ಮಿ, ಅನಿತಾ, ಸವಿತಾ, ರೇಖಾ ಇತರರು ಇದ್ದರು.

# ನಿರಾಕ್ಷೇಪಣಾ ಪತ್ರ ಪಡೆಯದೇ ಪರವಾನಿಗೆ ನೀಡಲು ಆಗ್ರಹ

ದಾವಣಗೆರೆ, ಡಿ. 6- 21 ಮೀಟರ್‌ವರೆಗಿನ ಕಟ್ಟಡಗಳಿಗೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯದೇ ಪರವಾನಿಗೆ ನೀಡಬೇಕೆಂದು ಆಗ್ರಹಿಸಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. 21 ಮೀಟರ್ ಒಳಗಿನ ಎತ್ತರದ ನೂತನವಾಗಿ ನಿರ್ಮಿಸುವ ಕಟ್ಟಡಗಳಿಗೆ ಅಗ್ನಿಶಾಮಕ ಕಾಯ್ದೆಗೆ ಮಾರ್ಚ್ ತಿಂಗಳಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿದ್ದರು. ಅನುಷ್ಠಾನಗೊಳಿಸದೇ ಸಾರ್ವಜನಿಕರಿಗೆ ತೊಂದರೆಯಾಗುವುದರ ಜೊತೆಗೆ ಮಹಾನಗರ ಪಾಲಿಕೆ ಆದಾಯಕ್ಕೂ ನಷ್ಟ ಉಂಟಾಗುತ್ತಿದೆ. ಕೂಡಲೇ ಅಗ್ನಿಶಾಮಕ ಇಲಾಖೆಯಿಂದ ಎನ್‌ಓಸಿ ಕಡ್ಡಾಯಗೊಳಿಸದೇ ಕಟ್ಟಡ ಪರವಾನಿಗೆ ನೀಡಲು ಆಗ್ರಹಿಸಿದ್ದಾರೆ. ಪಾಲಿಕೆಗೆ ಆದಾಯ ಹೆಚ್ಚಿಸುವ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಈ ಕೂಡಲೇ ಅಗ್ನಿಶಾಮಕ ನಿರಾಕ್ಷೇಪಣೆ ಪಡೆಯದೇ 21 ಮೀಟರ್ ವರೆಗಿನ ಕಟ್ಟಡಗಳಿಗೆ ನಿರ್ಮಾಣ ಪರವಾನಿಗೆ ನೀಡಲು ಅಗತ್ಯ ಕ್ರಮ ಕೈಗೊಳ್ಳಲು ಆದೇಶ ನೀಡಲು ಜಿಲ್ಲಾಧಿಕಾರಿಗಳನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಆಯುಕ್ತರಾದ ರೇಣುಕಾ, ಉಪ ಮಹಾಪೌರರಾದ ಯಶೋಧ ಹೆಗ್ಗಪ್ಪ, ಪಾಲಿಕೆ ಸದಸ್ಯರಾದ ಕೆ.ಎಂ. ವೀರೇಶ್, ಆರ್. ಶಿವಾನಂದ್ ಉಪಸ್ಥಿತರಿದ್ದರು.

## ಅರ್ಜುನ ಆನೆ ಸಾವಿನ ಸಮಗ್ರ ತನಿಖೆ

ಬೆಳಗಾವಿ, ಡಿ. 6 - ಎಂಟು ಬಾರಿ ದಸರಾ ಅಂಬಾರಿ ಹೊತ್ತಿದ್ದ ಆನೆ ಅರ್ಜುನನ ಸಾವಿನ ಪ್ರಕರಣದ ಸಮಗ್ರ ತನಿಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಅರ್ಜುನ ಸಾವಿಗೀಡಾಗಿರುವುದು ದುರದೃಷ್ಟಕರ, ಈ ಸಾವಿನ ಬಗ್ಗೆ ಅನೇಕ ಸಂಶಯಗಳು ಮೂಡಿವೆ, ಇವನ್ನು ನಿವಾರಿಸಲು ಮತ್ತು ತಪ್ಪಿತಸ್ಥರಿದ್ದರೆ, ಕ್ರಮ ಕೈಗೊಳ್ಳಲು ತನಿಖಾ ವರದಿ ಸಹಕಾರಿಯಾಗಲಿದೆ ಎಂದರು.

## ನಗರದಲ್ಲಿ ಇಂದು ಯೋಗ ಉಪನ್ಯಾಸ

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 3.30 ರಿಂದ 4.30 ರವರೆಗೆ ವಿವೇಕ ಪೋಷಕರ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ 'ಕಾಡುವ ಬೆನ್ನುನೋವು ಇದಕ್ಕಿದೆ ಯೋಗದಲ್ಲಿ ಮದ್ದು' ಎಂಬ ವಿಷಯ ಕುರಿತು ಯೋಗ ಗುರು ರಾಘವೇಂದ್ರ ಗುರೂಜಿ ಮಾತನಾಡಲಿದ್ದಾರೆ.


SHAA EDUCATIONAL TRUST (R)

**UNITED INTERNATIONAL SCHOOL**

**Required**

| Sl. No. | Post | Qualification | No. of Posts |
|---|---|---|---|
| 1. | PRO | Post Graduate/Graduate with fluency in English & Computer Skills (MS Office, Excel, Word, etc., Kannada & English Typing) | 1 |
| 2. | Clerk | Post Graduate/Graduate with fluency in English, Computer Skills (MS Office, Excel, Word, etc., Kannada & English Typing), SATS & UDISE + Experience | 1 |

Contact : 9845271037, 9986735151, 8660278171
#125, Doddabudihal Road, Behind Taj Palace Marriage Hall, Davangere- 577001


## ಕಾಣೆಯಾಗಿದ್ದಾರೆ



ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣಾ ನಂ. 424/2023, ಕಲಂ. : 424/2023ರ ಈ ಮೇಲಿನ ಭಾವ ಚಿತ್ರದಲ್ಲಿರುವ ವ್ಯಕ್ತಿ, **ರಾಜಯ್ಯ ತಂದೆ ವೆಂಕಟಯ್ಯ**, 48 ವರ್ಷ, ಕೂಲಿ ಕೆಲಸ, ಅಕ್ಕಿ ಹೆಬ್ಬಾಳ್ ಗ್ರಾಮ, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆಯವರಾದ ಇವರು, ದಿನಾಂಕ 1-11-2003 ರಂದು ಆನಗೋಡು ಗ್ರಾಮದಿಂದ ಕಾಣೆಯಾಗಿದ್ದು, ಈ ವ್ಯಕ್ತಿಯ ಸುಳಿವು ಸಿಕ್ಕಲ್ಲಿ ಹತ್ತಿರ ಪೊಲೀಸ್ ಠಾಣೆಗಾಗಲೀ ಅಥವಾ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ : **08192-262555**ಕ್ಕೆ ಮಾಹಿತಿ ನೀಡಲು ಕೋರಲಾಗಿದೆ.

## ಮಾನ್ಯ ಪ್ರಧಾನ ಸೀನಿಯರ್ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ನ್ಯಾಯಾಲಯ, ದಾವಣಗೆರೆ

**ಕ್ರಿ.ಮಿಸ್. ನಂ. 682/2023**

**ಅರ್ಜಿದಾರರು :** ಶೇಖರಪ್ಪ ಯಾನೆ ಶೇಖರಪ್ಪ. ಎ ಯಾನೆ ಶೇಖರಪ್ಪ. ಆರ್ ಬಿನ್ ಲೇಟ್ ಸಿದ್ದಪ್ಪ, ವಯಸ್ಸು ಸುಮಾರು 64 ವರ್ಷ, ವಾಸ : ಮನೆ ನಂಬರ್ 164, ಹಳೇಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು, **- ವಿರುದ್ಧ -**

**ಎದುರುದಾರರು :** ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರರು, ದಾವಣಗೆರೆ ತಾಲ್ಲೂಕು.

**ಸಾರ್ವಜನಿಕ ಪ್ರಕಟಣೆಗಾಗಿ**

ಈ ಮೇಲ್ಕಂಡ ಅರ್ಜಿದಾರರು ಮೃತ ದಾಕ್ಷಾಯಣಮ್ಮ ಯಜಮಾನರು, ಮೃತ ದಾಕ್ಷಾಯಣಮ್ಮ ಇವರು ದಿನಾಂಕ 19.10.1999ರಂದು ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಕಛೇರಿಯ ಜನನ-ಮರಣ ನೋಂದಣಾಧಿಕಾರಿಗಳು, ದಾವಣಗೆರೆ ತಾಲ್ಲೂಕು ಇವರಿಗೆ ದಿನಾಂಕ 19.10.2023ರಂದು ಅರ್ಜಿ ಕೊಟ್ಟಿರುತ್ತಾರೆ. ಸದರಿ ಅರ್ಜಿಯನ್ನು ಸ್ವೀಕರಿಸಿದ ಎದುರುದಾರರು ಸದರಿ ದಿನದಂದೇ ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ಎದುರುದಾರರು ನೀಡುವಂತೆ ನಿರ್ದೇಶನ ನೀಡಬೇಕೆಂದು ಕೋರಿ ಅರ್ಜಿದಾರರು ಎದುರುದಾರರ ವಿರುದ್ಧ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಒಂದು ವೇಳೆ ಯಾರಿಗಾದರೂ ಈ ಅರ್ಜಿಗೆ ತಕರಾರು ಇದ್ದಲ್ಲಿ ತಾವಾಗಲೀ ಅಥವಾ ತಮ್ಮ ವಕೀಲರ ಮುಖೇನವಾಗಲೀ **ದಿನಾಂಕ 06.01.2024 ರಂದು ಬೆಳಿಗ್ಗೆ 11 ಗಂಟೆಗೆ** ಮೇಲ್ಕಾಣಿಸಿದ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಒಂದು ವೇಳೆ ಹಾಜರಾಗದಿದ್ದಲ್ಲಿ ಏನೂ ತಕರಾರು ಇಲ್ಲವೆಂದು ತೀರ್ಮಾನಿಸಲಾಗುವುದು ಎಂದು ಭಾವಿಸತಕ್ಕದ್ದು.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ **ತಾರೀಖು : 06.12.2023** ರಂದು ಕೊಡಲ್ಪಟ್ಟಿದೆ.

ಸಹಿ/- **(ವಿ.ಸಿ. ಮಹಾಂತಸ್ವಾಮಿ )**
ಅರ್ಜಿದಾರರ ಪರ ವಕೀಲರು
ಡೋರ್ ನಂ, 4/700, ದೀಕ್ಷಿತ್ ರಸ್ತೆ, ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- **ಶಿರಸ್ತೇದಾರರು**
ಸಿವಿಲ್ ಜಡ್ಜ್ (ಹಿ.ವಿ.) ಹಾಗೂ
ಸಿ.ಜೆ.ಎಂ ನ್ಯಾಯಾಲಯ, ದಾವಣಗೆರೆ.

# ಮಣ್ಣು ಗಣಿಗಾರಿಕೆ ತಡೆಯದ ಅಧಿಕಾರಿಗಳ ವಿರುದ್ಧ ತರಾಟೆ



ಹರಿಹರ, ಡಿ. 6 - ತಾಲ್ಲೂಕಿನ ಸಾರಥಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಅಕ್ರಮವಾಗಿ ಮಣ್ಣು ಗಣಿಗಾರಿಕೆ ನಡೆಯುತ್ತಿದ್ದು ಸಂಬಂಧ ಪಟ್ಟ ಅಧಿಕಾರಿಗಳು ಇದನ್ನು ತಡೆಯದೇ ಮೌನವಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ಹರಿಹರ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಆರೋಪಿಸಿದ್ದಾರೆ.

ಅಕ್ರಮ ಗಣಿಗಾರಿಕೆಯಿಂದ ಒಂದೆಡೆ ಕೃಷಿ ಜಮೀನುಗಳೆಲ್ಲಾ 20-30 ಅಡಿ ಆಳದ ಗುಂಡಿಗಾಗಿ ಮಾರ್ಪಡುತ್ತಿದ್ದರೆ, ಇನ್ನೊಂದೆಡೆ ಈ ಭಾಗದ ಸದರಿ ಮಣ್ಣುಗಣಿಗಾರಿಕೆಯ ಬೃಹತ್ ಗಾತ್ರದ ಲಾರಿಗಳು ಸಂಚರಿಸುವುದರಿಂದ ಸಾರಥಿ ಹಾಗೂ ಕರಲಹಳ್ಳಿ ಗ್ರಾಮಗಳು ಧೂಳುಮಯವಾಗಿ ಮಾರ್ಪಟ್ಟಿವೆ.

ಜಮೀನು ಸಮತಟ್ಟು ಮಾಡಲೆಂದು ತಹಶೀಲ್ದಾರರು, ಕೃಷಿ, ಗಣಿ ಮತ್ತು ಭೂ-ವಿಜ್ಞಾನ ಮತ್ತು ಗಣಿ ಇಲಾಖೆಯಿಂದ ಅನುಮತಿ ಪಡೆದವ ಕೆಲವರು ನಿಯಮದಂತೆ 3 ಅಡಿ ವರೆಗೆ ಮಾತ್ರ ಸಮತಟ್ಟ ಮಾಡದೆ 20 ಅಡಿವರೆಗೆ ಗುಂಡಿ ತೋಡಿ ನೂರಾರು ಲಾರಿ ಲೋಡ್ ಮಣ್ಣು ಸಾಗಣೆ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

**ಪ್ರತಿಭಟನೆ** : ಮಂಗಳವಾರ ಸಂಜೆ ಧೂಳು ಸೃಷ್ಟಿಸುವ ಮಣ್ಣು ಸಾಗಣೆ ಲಾರಿಗಳನ್ನು ತಡೆದು ಕರಲಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದಾರೆ. ಜಿಲ್ಲಾಧಿಕಾರಿ ಕೂಡಲೇ ಸಾರಥಿ ಹಾಗೂ ಸುತ್ತಲಿನ ಪ್ರದೇಶಕ್ಕೆ ಭೇಟಿ ನೀಡಬೇಕು, ಡ್ರೋಣ್ ಯಂತ್ರದ ಮೂಲಕ ವೈಮಾನಿಕ ಸಮೀಕ್ಷೆ ನಡೆಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ಅಕ್ರಮ ಹೂಡಿಕೆಯಲ್ಲಿ ತೊಡಗಿದ್ದ 100 ವೆಬ್‌ಸೈಟ್‌ಗಳಿಗೆ ತಡೆ

ನವದೆಹಲಿ, ಡಿ. 6 – ಅಕ್ರಮ ಹೂಡಿಕೆ ಹಾಗೂ ಅರೆಕಾಲಿಕ ಉದ್ಯೋಗ ವಂಚನೆಯಲ್ಲಿ ತೊಡಗಿದ್ದ 100 ವೆಬ್‌ಸೈಟ್‌ಗಳನ್ನು ತಡೆದಿರುವುದಾಗಿ ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಈ ವೆಬ್‌ಸೈಟ್‌ಗಳು ವಿದೇಶದಿಂದ ಕಾರ್ಯನಿರ್ವಹಿಸುತ್ತಿದ್ದವು. ಈ ವೆಬ್‌ಸೈಟ್‌ಗಳನ್ನು ತಡೆಯುವಂತೆ ಭಾರತೀಯ ಸೈಬರ್ ಅಪರಾಧ ತಡೆಯ ಸಮನ್ವಯ ಕೇಂದ್ರವು ಶಿಫಾರಸ್ಸು ಮಾಡಿತ್ತು. ಅದರ ಆಧಾರದ ಮೇಲೆ ಗೃಹ ಸಚಿವಾಲಯ ಕ್ರಮ ತೆಗೆದುಕೊಂಡಿದೆ. ಮನೆಯಲ್ಲಿ ಕುಳಿತುಕೊಂಡೇ ಕೆಲಸ ಮಾಡಿ, ಮನೆಯಲ್ಲಿ ಕುಳಿತೇ ಹಣ ಗಳಿಸಿ ಮತ್ತಿತರೆ ಹೆಸರಿನ ಜಾಹೀರಾತುಗಳ ಮೂಲಕ ಈ ವೆಬ್‌ಸೈಟ್‌ಗಳು ವಂಚನೆ ನಡೆಸುತ್ತಿದ್ದವು.

ಅರೆ ಕಾಲಿಕ ಉದ್ಯೋಗ ಬಯಸುವ ನಿವೃತ್ತ ಉದ್ಯೋಗಿಗಳು, ಮಹಿಳೆಯರು ಹಾಗೂ ನಿರುದ್ಯೋಗಿ ಯುವಕರನ್ನು ಗುರಿಯಾಗಿಟ್ಟುಕೊಂಡು ಈ ವಂಚನೆ ನಡೆಸಲಾಗುತ್ತಿತ್ತು. ಈ ಜಾಲಕ್ಕೆ ಸಿಲುಕುವವರಿಗೆ ವಿಡಿಯೋಗಳ ಲೈಕ್ ಇಲ್ಲವೇ ಸಬ್‌ಸ್ಕ್ರೈಬ್ ರೀತಿಯ ಚಟುವಟಿಕೆಗಳಲ್ಲಿ ತೊಡಗಲು ತಿಳಿಸಲಾಗುತ್ತಿತ್ತು.

ಆರಂಭಿಕ ದಿನಗಳಲ್ಲಿ ಇವರಿಗೆ ಕಮೀಷನ್ ನೀಡಲಾಗುತ್ತಿತ್ತು. ನಂತರ ಹೆಚ್ಚಿನ ಹೂಡಿಕೆ ಮಾಡಿ ಹೆಚ್ಚು ಹಣ ಗಳಿಸುವಂತೆ ಆಮಿಷ ಒಡ್ಡಲಾಗುತ್ತಿತ್ತು. ಹೆಚ್ಚಿನ ಹಣ ಜಮಾ ಮಾಡಿದ ನಂತರ ಖಾತೆಗಳನ್ನು ಸ್ಥಗಿತಗೊಳಿಸಲಾಗುತ್ತಿತ್ತು.

ಈ ವಂಚಕರ ಮೊಬೈಲ್ ಸಂಖ್ಯೆ ಹಾಗೂ ಸಾಮಾಜಿಕ ಮಾಧ್ಯಮ ವಿವರಗಳನ್ನು ಸೈಬರ್ ಅಪರಾಧ ದಾಖಲಿಸುವ ಪೋರ್ಟಲ್ ಆಗಿರುವ ಎನ್.ಸಿ.ಆರ್.ಪಿ.ನಲ್ಲಿ ತಿಳಿಸಿದರೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಲಿದೆ ಎಂದು ಗೃಹ ಸಚಿವಾಲಯ ತಿಳಿಸಿದೆ.

# ಚಿಗಟೇರಿ : ಶ್ರೀ ಶಿವನಾರದಮುನಿ ಸ್ವಾಮಿ ಕಡೇ ಕಾರ್ತಿಕೋತ್ಸವ ನಾಳೆ



ಹರಪನಹಳ್ಳಿ, ಡಿ.6- ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 9ರ ಶನಿವಾರ ಸಂಜೆ ಶ್ರೀ ಶಿವನಾರದಮುನಿ ಸ್ವಾಮಿಯ ಕಡೇ ಕಾರ್ತಿಕೋತ್ಸವ ನಡೆಯಲಿದೆ.

ಕಾರ್ತಿಕೋತ್ಸವದ ಪ್ರಯುಕ್ತ ಅಂದು ಶ್ರೀ ಸ್ವಾಮಿಗೆ ಪೂಜಾ ವಿಧಿ-ವಿಧಾನಗಳು ಜರುಗಲಿದ್ದು, ನಂತರ ವಿಜೃಂಭಣೆಯ ಕಾರ್ತಿಕ ದೀಪೋತ್ಸವ ಏರ್ಪಾಡಾಗಿದೆ.


ಸರ್ವ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ಸ್ವಾಮಿಯ ಕೃಪಾಶೀರ್ವಾದ ಪಡೆಯುವಂತೆ ಶ್ರೀ ನಾರದಮುನಿ ಸೇವಾ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಕೋರಿದ್ದಾರೆ. ಶಿವಶಂಕರಪ್ಪ, ಕಾರ್ಯಾಧ್ಯಕ್ಷ ಎಸ್.ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿರುವರು.

# ನಗರದ ಗೌರಮ್ಮಾಜಿ ಮಂದಿರದಲ್ಲಿಂದು ಜ್ಞಾನಯಜ್ಞ ಸಪ್ತಾಹ ಸಮಾರೋಪ



ಎಸ್.ಎಸ್.ಲೇ-ಔಟ್ 'ಬಿ' ಬ್ಲಾಕ್, ರಿಂಗ್ ರಸ್ತೆಯಲ್ಲಿರುವ ಶ್ರೀ ಸ.ಸ. ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಶ್ರೀ ಗೌರಮ್ಮಾಜಿ ಮಹಾರಾಜರ 28ನೇ ಜ್ಞಾನಯಜ್ಞ ಸಪ್ತಾಹದ ಅಂಗವಾಗಿ ಇಂದು ಬೆಳಗಿನ ಪೂಜಾದಿ ಕಾರ್ಯಕ್ರಮಗಳ ನಂತರ ಮಧ್ಯಾಹ್ನ 12 ಗಂಟೆಗೆ ಮಾತೋಶ್ರೀಯವರ 'ಪುಣ್ಯಸ್ಮರಣೆ' ಮತ್ತು ಪುಷ್ಪವೃಷ್ಟಿಗೈಯ್ಯುವ ಕಾರ್ಯಕ್ರಮವಿದೆ.

# ಕೋಮಲ್ ಕೆ. ಜಿಲ್ಲಾ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಡಿ.6- ಉತ್ತರ ವಲಯ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ 2023-24ರಲ್ಲಿ ಡಾ.ಶಿ.ಮು.ಶ. ಪ.ಪೂ. ಕಾಲೇಜಿನ ವಿದ್ಯಾರ್ಥಿನಿ ಕೋಮಲ್ ಕೆ. ಇಂಗ್ಲಿಷ್ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಚಿತ್ರ : ಜಿಗಳಿ ಪ್ರಕಾಶ್

## ಕೊಕ್ಕರೆ ಲಗ್ಗೆ ...

ಉಕ್ಕಡಗಾತ್ರಿ ಸಮೀಪ ತುಂಗಭದ್ರಾ ನದಿ ಪಾತ್ರದ ರೈತರು ಈಗಾಗಲೇ ಭತ್ತದ ಕಟಾವು ಮುಗಿಸಿದ್ದು ಬೇಸಿಗೆ ಹಂಗಾಮಿಗೆ ಭತ್ತದ ನಾಟಿ ಮಾಡಲು ಭತ್ತದ ಬೀಜ ಚೆಲ್ಲಲು ಸಸಿ ಮಡಿಗಳನ್ನು ಸಿದ್ದ ಪಡಿಸುತ್ತಿದ್ದಾರೆ. ಕೆಸರ ಗದ್ದೆಯಲ್ಲಿ ಹುಳುಗಳ ಹುಡುಕಾಟಕ್ಕಾಗಿ ಬಿಳಿ ಕೊಕ್ಕರೆಗಳು ಲಗ್ಗೆ ಇಟ್ಟಿರುವ ದೃಶ್ಯ ಬುಧವಾರ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿತು.

# ಬೌದ್ಧಿಕ ದಾಸ್ಯದಿಂದ ಹೊರಬರದ ಹೊರತು ಏಳಿಗೆ ಸಾಧ್ಯವಿಲ್ಲ

## ಉಕ್ಕಡಗಾತ್ರಿಯ ಸ್ಮಶಾನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಡಾ. ಎ.ಬಿ. ರಾಮಚಂದ್ರಪ್ಪ



ಮಲೇಬೆನ್ನೂರು, ಡಿ.6- ಮೌಢ್ಯ, ಬಡವರ ನಿಜವಾದ ಶತ್ರುವಾಗಿದ್ದು, ಬೌದ್ಧಿಕ ದಾಸ್ಯದಿಂದ ಬಿಡುಗಡೆಯಾಗದ ಹೊರತು ಬಡವರ, ಶ್ರಮಿಕರ ಏಳಿಗೆ ಸಾಧ್ಯವಿಲ್ಲ ಎಂದು ನಿವೃತ್ತ ಪ್ರಾಧ್ಯಾಪಕ ಹಾಗೂ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಬುಧವಾರ ಉಕ್ಕಡಗಾತ್ರಿ ಗ್ರಾಮದ ಬುದ್ಧ, ಬಸವ, ಅಂಬೇಡ್ಕರ್ ಶಾಂತಿಧಾಮ (ಸ್ಮಶಾನ)ದಲ್ಲಿ ಮಾನವ ಬಂಧುತ್ವ ವೇದಿಕೆ ಹಾಗೂ ಉಕ್ಕಡಗಾತ್ರಿ ಗ್ರಾಮಸ್ಥರ ಸಹಯೋಗದಲ್ಲಿ 3ನೇ ಬಾರಿಗೆ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 67ನೇ ಮಹಾಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಬುದ್ಧ, ಬಸವಣ್ಣನವರ ವಿಚಾರಧಾರೆಗಳನ್ನು ಜನರು ಅಳವಡಿಸಿಕೊಳ್ಳದಂತೆ ಸಂಪ್ರದಾಯ, ಮೌಢ್ಯದ ಬೀಜಗಳನ್ನು ಭಿತ್ತಿ ಅದರ ಲಾಭ ಪಡೆಯುತ್ತಿರುವ ಜನರ ಬಗ್ಗೆ ಬಡವರು ಜಾಗೃತರಾಗಬೇಕು. ಶಿಕ್ಷಣ, ಸಂಘಟನೆ ಬಡವರ ಗುರಿ ಆಗಬೇಕು.

ಯಜ್ಞ, ಯಾಗಗಳಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿದ್ದರೆ ದೇಶದಲ್ಲಿ ಸಮಸ್ಯೆಗಳೇ ಇರುತ್ತಿರಲಿಲ್ಲ. ಯಜ್ಞ, ಯಾಗಗಳನ್ನು ಮಾಡುವವರೇ ಮೊದಲು ಶ್ರೀಮಂತರಾಗಿ ಬಿಡುತ್ತಿದ್ದರು ಎಂಬುದನ್ನು ಬಡವರು ಅರ್ಥಮಾಡಿಕೊಳ್ಳಬೇಕು.

ಅದಕ್ಕಾಗಿ ಬಸವಣ್ಣನವರು ಗುಡಿಗಳನ್ನು ನಿರಾಕರಿಸಿದ್ದರು. ಅಂಬೇಡ್ಕರ್ ಅವರು ಕಷ್ಟ ಪಟ್ಟು ಓದಿ ಸಂವಿಧಾನ ರಚನೆ ಮಾಡದಿದ್ದರೆ ಬಡವರ, ಶ್ರಮಿಕರ ಸ್ಥಿತಿ ಯಾವ ರೀತಿ ಇರುತ್ತಿತ್ತೆಂದು ಯಾರೂ ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಅಂಬೇಡ್ಕರ್ ಅವರು ಹೇಳಿದಂತೆ ಜನರು ವಿದ್ಯಾವಂತರಾಗಿ, ಸಂಘಟಿತರಾಗಿ, ಉತ್ತೇಜಿತರಾಗಬೇಕು. ಏಕೆಂದರೆ ಮೌಢ್ಯ ಮೀರಿದವರು ಪ್ರಗತಿ ಸಾಧಿಸಿರುವುದನ್ನು ಬಡವರು ನೋಡಿ ಕಲಿಯಬೇಕು. ಮನುಷ್ಯ ಸಂಬಂಧವನ್ನು ಬೆಸೆಯುವುದಕ್ಕಾಗಿಯೇ ಸತೀಶ್ ಜಾರಕಿಹೊಳಿ ಅವರು ಮಾನವ ಬಂಧುತ್ವ ವೇದಿಕೆ ಹುಟ್ಟಿ ಹಾಕಿ, ಆ ಮೂಲಕ ಜನರ ಅಗತ್ಯತೆಗಳಿಗೆ ಪೂರಕ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ನವೀನ್, ಗ್ರಾಮದ ಮಾಲತೇಶಪ್ಪ ಹೊತ್ತಿಗಿ, ಗದಿಗೇಶ್ ಕಾಯಕದ, ಉಪನ್ಯಾಸಕಿ ಸಂಗೀತಾ ಬಂಗೇರ್ ಮತ್ತು ಕುಂಬಳೂರು ವಾಸು, 'ಜನತಾವಾಣಿ' ಹಿರಿಯ ವರದಿಗಾರ ಜಿಗಳಿ ಪ್ರಕಾಶ್ ಮಾತನಾಡಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಕಾಶ್, ಡಿಎಸ್‌ಎಸ್ ಸಂಚಾಲಕ ಮಂಜುನಾಥ್, ಭಾನುವಳ್ಳಿ ಗ್ರಾ.ಪಂ. ಸದಸ್ಯ ಧನ್ಯಕುಮಾರ್, ಮಾನವ ಬಂಧುತ್ವ ವೇದಿಕೆಯ ಹೊನ್ನಾಳಿ ಸಂಚಾಲಕ ಗಣೇಶ್, ಗ್ರಾ.ಪಂ. ಕಂಪ್ಯೂಟರ್ ಆಪರೇಟರ್ ಪ್ರಶಾಂತ್, ಹರಿಹರದ ಪಾರ್ವತಿ ಭರತ್, ಗ್ರಾಮದ ಎ.ಕೆ. ಚಂದ್ರಪ್ಪ, ಗದಿಗೆಪ್ಪ, ಸಿದ್ದೇಶ್, ಹನುಮಂತ, ಕರಿಬಸಪ್ಪ, ವಸಂತ್, ಬಸವರಾಜ್, ಸಂತೋಷ್, ಜಿ.ಎಸ್. ಮಹೇಶ್ವರಪ್ಪ, ಶಿಕ್ಷಕ ಬಸವರಾಜ್, ಚಂದ್ರಪ್ಪ ಬಂಗೇರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಮಾನವ ಬಂಧುತ್ವ ವೇದಿಕೆಯ ಮಂಜು ದೊಡ್ಮನಿ ಸ್ವಾಗತಿಸಿದರು.

# ನಗರದ ಬೆಡಗಿ ದೀಕ್ಷಾ ವಿ.ಕರಿಗೌಡರ್ ಮಿಸ್ ಕರ್ನಾಟಕ ಸ್ಟೈಲ್ ಐಕಾನ್ ರನ್ನರ್ ಅಪ್





ದಾವಣಗೆರೆ, ಡಿ. 6- ಬೆಂಗಳೂರಿನ ರಾಡಿಸನ್ ರಾಡಿಸನ್ ಬ್ಲೂ ಹೋಟೆಲ್ ಎಟ್ರಿಯಾದಲ್ಲಿ ಡಿ.3ರ ಭಾನುವಾರ ನಡೆದ ಮಿಸ್ ಕರ್ನಾಟಕ ಸ್ಟೈಲ್ ಐಕಾನ್-2023ರ ಸ್ಪರ್ಧೆಯಲ್ಲಿ ದಾವಣಗೆರೆ ಬೆಡಗಿ 18 ವರ್ಷದ ದೀಕ್ಷಾ ವಿ. ಕರಿಗೌಡರ್ ರನ್ನರ್ ಅಪ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ದೀಕ್ಷಾ, ಸ್ಥಳೀಯ ವಿವೇಕಾನಂದ ಕರಿಗೌಡರ್ ಹಾಗೂ ಶಿವರಂಜನಿ ವಿ.ಕೆ. ದಂಪತಿಯ ಪುತ್ರಿ. ನಿವೃತ್ತ ಡಿವೈಎಸ್ಪಿ ಕರಿಗೌಡರ್ ಅವರ ಮೊಮ್ಮಗಳು. ನಗರದ ಬಾಪೂಜಿ ಇಂಜಿನಿಯರಿಂಗ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಇನ್‌ಫಾರ್ಮೇಷನ್ ಸೈನ್ಸ್ ವಿಭಾಗದಲ್ಲಿ ಓದುತ್ತಿದ್ದಾರೆ.

ಈ ಹಿಂದೆ 'ಮಿಸ್ ದಾವಣಗೆರೆ' ಹಾಗೂ 'ಮಿಸ್ ಟೀನ್ ಮಂಗಳೂರು' ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದ ದೀಕ್ಷಾ, ಇದೀಗ ಮಿಸ್ ಕರ್ನಾಟಕ ಸ್ಟೈಲ್ ಐಕಾನ್ ಸ್ಪರ್ಧೆಯಲ್ಲಿ ರನ್ನರ್ ಅಪ್ ಆಗಿ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಭಾಗವಹಿಸುವ ತವಕದಲ್ಲಿದ್ದಾರೆ.

ದೀಕ್ಷಾ ಅವರ ಸಾಧನೆಗೆ ಬಿಐಇಟಿ ಕಾಲೇಜು ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದಿಸಿದ್ದಾರೆ.

# ಪ್ರತಿ ಜಿಲ್ಲೆಯಲ್ಲಿ ಪತ್ರಿಕಾ ವಿತರಕರ ನೋಂದಣಿ, ಹೊಸ ಯೋಜನೆಗೆ ಸೇರ್ಪಡೆ



ಬೆಂಗಳೂರು, ಡಿ.6- ಪ್ರತಿ ಜಿಲ್ಲೆಯಲ್ಲಿಯೂ ಪತ್ರಿಕಾ ವಿತರಕರ ನೋಂದಣಿ ಮಾಡಿ, ಹೊಸ ಯೋಜನೆಗೆ ಸೇರ್ಪಡೆ ಮಾಡಲಾಗುವುದು ಎಂದು ಕಾರ್ಮಿಕ ಆಯುಕ್ತ ಡಾ. ಹೆಚ್.ಎನ್.ಗೋಪಾಲ ಕೃಷ್ಣ ತಿಳಿಸಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ಅಧ್ಯಕ್ಷರಾದ ಶಿವಾನಂದ ತಗಡೂರು ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು ವಿತರಕರ ಪರವಾಗಿ ತಮ್ಮನ್ನು ಭೇಟಿ ಮಾಡಿ ಸಲ್ಲಿಸಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಅಪಘಾತದಲ್ಲಿ ಮೃತಪಟ್ಟ ಪತ್ರಿಕಾ ವಿತರಕರಿಗೆ 2 ಲಕ್ಷ, ವೈದ್ಯಕೀಯ ನೆರವಿಗೆ 1 ಲಕ್ಷ ರೂ. ನೆರವಿನ ಯೋಜನೆಯನ್ನು ಸರ್ಕಾರ ಜಾರಿ ಮಾಡಿದೆ. ಹೊಸ ಯೋಜನೆಯ ಜಾರಿಗೆ ವಿತರಕರ ಸಹಕಾರ ಅಗತ್ಯವಾಗಿದೆ. ಯೋಜನೆ ಸದುಪಯೋಗಪಡಿಸಿಕೊಳ್ಳಲು ಸಂಘಟಿತರಾಗಿ ಮುಂದೆ ಬರುವಂತೆ ಅವರು ಸಲಹೆ ನೀಡಿದರು.

ವಿತರಕರು ಅಪಘಾತ ಮತ್ತಿತರ ಸಂಕಷ್ಟಕ್ಕೆ ಒಳಗಾದ ಸಂದರ್ಭದಲ್ಲಿ ನೆರವಾಗಲು ಯಾವುದೇ ಯೋಜನೆಗಳು ಇರಲಿಲ್ಲ ಎನ್ನುವುದನ್ನು ಸಿಎಂ ಸಿದ್ದರಾಮಯ್ಯ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಅರಿತು, ಕಾರ್ಮಿಕ ಇಲಾಖೆ ಯೋಜನೆ ವ್ಯಾಪ್ತಿಗೆ ತರುವ ಮೂಲಕ ಅವರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕೆಲಸವನ್ನು ಮಾಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಕಾರ್ಮಿಕಾಧಿಕಾರಿ ರವಿಕುಮಾರ್ ಹಾಜರಿದ್ದರು .

# ಕವಿತೆಗಳ ರಚನೆಗೂ ಲಯ ಅಗತ್ಯ: ಡಾ.ಹೇಮಾ ಪಟ್ಟಣ ಶೆಟ್ಟಿ



ದಾವಣಗೆರೆ, ಡಿ.6- ಉಸಿರಾಟಕ್ಕೂ ಒಂದು ಲಯ ಇರುವಂತೆ ಕವಿತೆಗಳ ರಚನೆಗೂ ಲಯ ಇರಬೇಕು. ಪದ್ಯಕ್ಕೆ ಪ್ರಾಸವೇ ಬೇಕಿಲ್ಲ ಎಂದು ಹಿರಿಯ ಸಾಹಿತಿ ಡಾ.ಹೇಮಾ ಪಟ್ಟಣ ಶೆಟ್ಟಿ ಹೇಳಿದರು.

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ ನಗರದ ರೋಟರಿ ಬಾಲಭವನದಲ್ಲಿ ಮೊನ್ನೆ ಏರ್ಪಾಡಾಗಿದ್ದ ಕಾವ್ಯ ಕುಂಚ-3, ಕವನ ಸಂಕಲನ, ಕುಂಚ ಕೈಪಿಡಿ ಕಿರುಹೊತ್ತಿಗೆ ಲೋಕಾರ್ಪಣೆ, ಕವಿಗೋಷ್ಠಿ ಸಮಾರಂಭದಲ್ಲಿ ಪುಸ್ತಕಗಳ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಚಪಾತಿ ಹಿಟ್ಟು ನಾದಿದಷ್ಟೂ ಚಪಾತಿ ಮೃದುವಾಗುತ್ತವೆ. ಹಾಗೆಯೇ ಭಾಷೆಯನ್ನು ಪಳಗಿಸಿಕೊಂಡಷ್ಟೂ ಕೃತಿ ಉತ್ತಮವಾಗಿ ಮೂಡಿ ಬರುತ್ತವೆ ಎಂದು ಹೇಳಿದರು.

ಪ್ರೀತಿ, ಪ್ರಣಯ, ಜಗಳ, ತುಂಟಾಟಗಳ ಮೂಲಕ ಭಾಷೆಯನ್ನು ಪಳಗಿಸಿಕೊಳ್ಳಬೇಕು. ಓದುವ ಅಭ್ಯಾಸ ಮೈಗೂಡಿಸಿಕೊಳ್ಳಬೇಕು. ಓದಿದ್ದನ್ನು ಮನನ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾವ್ಯಗಳ ರಚನೆ ಮೂಲಕ ವ್ಯಕ್ತಿತ್ವವನ್ನು ಕಟ್ಟುವ ಅಗತ್ಯತೆ ಇಂದು ಹೆಚ್ಚಾಗಿದೆ. ಆ ಕೆಲಸವನ್ನು ಸಂಘ-ಸಂಸ್ಥೆಗಳು ಮಾಡುತ್ತಿವೆ. ಕಾವ್ಯ ಕುಂಚದಲ್ಲಿ 125 ಕವಿತೆಗಳಿವೆ. ಹೊಸದಾಗಿ ಬರವಣಿಗೆ ಆರಂಭಿಸಿದವರಿಗೆ ಇದೊಂದು ಉತ್ತಮ ವೇದಿಕೆಯೂ ಆಗಿದೆ ಎಂದು ಶ್ಲಾಘಿಸಿದರು.

ಬದುಕಿನಲ್ಲಿ ಯಾವ ರೀತಿಯಲ್ಲಾದರೂ ಒಮ್ಮೆ ಬರವಣಿಗೆ ಆರಂಭವಾಗುತ್ತದೆ. ಅದರಲ್ಲೂ ಹದಿ ಹರೆಯದ ವೇಳೆ ಬರೆಯುವ ಬರವಣಿಗೆ ಸ್ಫುಟವಾಗಿರುತ್ತದೆ. ದಿನಕ್ಕೆ ಹತ್ತು ಕಾವ್ಯ ಬರೆದರೂ ಪರವಾಗಿಲ್ಲ. ಆದರೆ ಪ್ರಕಟ ಮಾಡುವಾಗ ಮತ್ತೆ ಮತ್ತೆ ತಿದ್ದಿಕೊಳ್ಳಿ ಎಂದು ಸಲಹೆ ನೀಡಿದರು. ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿ ಎ.ಸಿ. ಶಶಿಕಲಾ ಶಂಕರಮೂರ್ತಿ, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ, ಸಂಸ್ಥಾಪಕರಾದ ಜ್ಯೋತಿ ಗಣೇಶ ಶೆಣೈ, ಮಾಜಿ ಅಧ್ಯಕ್ಷರಾದ ಪರ್ವೀನ್ ಅಮೀರ್ ಜಾನ್ ಇತರರು ಉಪಸ್ಥಿತರಿದ್ದರು.

# ಸತತ 7ನೇ ದಿನ ಷೇರುಪೇಟೆ ಏರುಮುಖ

ಮುಂಬೈ, ಡಿ. 6 – ಸತತ ಏಳನೇ ದಿನ ಷೇರುಪೇಟೆಯಲ್ಲಿ ಉತ್ಸಾಹ ಕಂಡು ಬಂದಿದ್ದು, ಸೂಚ್ಯಂಕ ದಾಖಲೆ ಮಟ್ಟಕ್ಕೆ ತಲುಪಿದೆ. ರಿಲೈಯನ್ಸ್ ಇಂಡಸ್ಟ್ರೀಸ್, ಐ.ಟಿ.ಸಿ. ಹಾಗೂ ಎಲ್ ಅಂಡ್ ಟಿ ಷೇರುಗಳ ಮೌಲ್ಯದಲ್ಲಿ ಏರಿಕೆ ಕಂಡು ಬಂದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ ಹಾಗೂ ವಿದೇಶಿ ಹೂಡಿಕೆಯಲ್ಲಿ ಏರಿಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಉತ್ಸಾಹಕ್ಕೆ ಕಾರಣವಾಗಿದೆ. 30 ಅಂಶಗಳ ಬಿ.ಎಸ್.ಇ. ಸೂಚ್ಯಂಕ ಶೇ.0.52ರ ಏರಿಕೆ ಕಂಡು 69,653.73ರ ಹಂತಕ್ಕೆ ತಲುಪಿದೆ. ನಿಫ್ಟಿ ಸೂಚ್ಯಂಕ ಶೇ.0.40ರ ಏರಿಕೆ ಕಂಡು 20,937.70 ಅಂಕಗಳಿಗೆ ತಲುಪಿದೆ.

# ಟಾಟಾ ಹೆಸರಿನಲ್ಲಿ ನಕಲಿ ವಿಡಿಯೋ

ನವದೆಹಲಿ, ಡಿ. 6-ತಮ್ಮ ಹೆಸರನ್ನು ಬಳಸಿಕೊಂಡು ಹೂಡಿಕೆಯ ಸಲಹೆ ನೀಡುವ ನಕಲಿ ಸಂದರ್ಶನ ಸೃಷ್ಟಿಸಲಾಗಿದೆ ಎಂದು ಟಾಟಾ ಸಮೂಹದ ಮಾಜಿ ಅಧ್ಯಕ್ಷ ರತನ್ ಟಾಟಾ ತಿಳಿಸಿದ್ದಾರೆ. ಈ ಬಗ್ಗೆ ಇನ್‌ಸ್ಟಾಗ್ರಾಂನಲ್ಲಿ ಹೇಳಿಕೆ ನೀಡಿ ರುವ ಟಾಟಾ, ಸೋನಾ ಅಗರ್‌ವಾಲ್ ಎಂಬುವವರು ತಮ್ಮ ಸಂದರ್ಶನ ನಡೆಸು ತ್ತಿರುವ ರೀತಿಯ ವಿಡಿಯೋ ಪ್ರಸಾರ ಮಾಡಲಾಗಿದೆ. ಇದು ನಕಲಿ ವಿಡಿಯೋ ಎಂದಿದ್ದಾರೆ.


|| ಶ್ರೀ ಕೊಟ್ಟೂರೇಶ್ವರ ಪ್ರಸನ್ನ ||

ಒಂಬತ್ತನೇ ವರ್ಷದ ಪುಣ್ಯಸ್ಮರಣೆ



ಜಿ. ಶಿವಪ್ರಕಾಶ್‌ರವರು

ನಿವೃತ್ತ ಅಸಿಸ್ಟೆಂಟ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ದಾವಣಗೆರೆ.

ಕರುಣಾಮಯಿ, ಸ್ನೇಹ ಜೀವಿ, ಸಹೃದಯಿ ಹಾಗೂ ನಮ್ಮೆಲ್ಲರ ಹಿತ ಚಿಂತಕರಾಗಿದ್ದ ನೀವುಗಳು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳು ಕಳೆದವು. ದೈಹಿಕವಾಗಿ ನೀವು ನಮ್ಮ ಬಳಿ ಇಲ್ಲದಿದ್ದರೂ, ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿರುತ್ತೀರಿ. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

✦ ಪತ್ನಿ : ಶ್ರೀಮತಿ ಎಂ.ಸುಜಾತ ಶಿವಪ್ರಕಾಶ್

✦ ಮಕ್ಕಳು : ಎಸ್. ಪ್ರವೀಣ್‌ಕುಮಾರ್, ಅಸಿಸ್ಟೆಂಟ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್

✦ ಎಸ್. ಸುನೀಲ್‌ಕುಮಾರ್

ಎಸ್. ವಿನಯ್ ಕುಮಾರ್, Marketing Superintendent, KMF

ಸೊಸೆಯಂದಿರು :

ಜಿ.ಎಸ್. ನಳಿನ ಸುನೀಲ್‌ಕುಮಾರ್, Senior Assistant, BESCOM

ಕವಿತ, ವೇದ ✦ ಮಗಳು : ಪೂಜಾ ಮಲ್ಲೇಶ್

✦ ಅಳಿಯ : ಮಲ್ಲೇಶ್. ಹೆಚ್. ಬಾಗಳಿ, ಪೊಲೀಸ್ ಇಲಾಖೆ

✦ ಮೊಮ್ಮಕ್ಕಳು : ಶ್ರೇಯಸ್, ಸಾನ್ವಿ, ಶುಭಾ

✦ ಪುಟಾಣಿಗಳಾದ : ನಂದಿನಿ, ನಂದಿತ (ಟ್ವಿಂಟು)

ದಾವಣಗೆರೆ ಜಿಲ್ಲಾ ಪೊಲೀಸ್ ಸಿಬ್ಬಂದಿ ಅಭಿಮಾನಿ ಬಳಗದವರು, ಅಂಗಡಿ ಮನೆತನದವರು ಹಾಗೂ ಬಂಧು-ಮಿತ್ರರು, ದಾವಣಗೆರೆ.


# ವಕೀಲರಲ್ಲಿ ಇರಲಿ ಅರ್ಪಣಾ ಮನೋಭಾವ



**ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾ|| ರಾಜೇಶ್ವರಿ ಹೆಗಡೆ ಕರೆ**

ದಾವಣಗೆರೆ, ಡಿ.6- ವಕೀಲರಲ್ಲಿ ಅರ್ಪಣಾ ಮನೋಭಾವ ಇರಬೇಕು. ವೃತ್ತಿಯಲ್ಲಿ ನೀತಿ ಪಾಲಿಸಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಸಲಹೆ ನೀಡಿದರು.

ನಗರದ ವಕೀಲರ ಸಮುದಾಯ ಭವನದಲ್ಲಿ ಜಿಲ್ಲಾ ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ವಕೀಲ ವೃತ್ತಿಯಲ್ಲಿ ಅನೇಕ ಸವಾಲುಗಳಿವೆ. ವಕೀಲರು ಸಮಾಜದಲ್ಲಿ ನಿರ್ವಹಿಸಬಹುದಾದ ಕಾರ್ಯಗಳಿಗೆ ಮಿತಿಯಿಲ್ಲ. ವಕೀಲರ ಎಲ್ಲಾ ಸಕ್ರಿಯ ಚಟುವಟಿಕೆಗಳಲ್ಲಿ ನ್ಯಾಯಾಂಗದ ಸಹಕಾರ ಇದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಹಿರಿಯ ವಕೀಲ ರಾಮಚಂದ್ರ ಕಲಾಲ್, ರಾಜಕಾರಣಿಗಳಿಗೆ ಕಾನೂನಿನ ಅರಿವು ಹೆಚ್ಚಾಗಿ ಇಲ್ಲದಿರುವ ಇಂದಿನ ದಿನಗಳಲ್ಲಿ ಶಾಸನಗಳನ್ನು ರೂಪಿಸುವಾಗ ಹಿರಿಯ ವಕೀಲರ ಸಲಹೆ ಪಡೆಯುವುದು ಸೂಕ್ತ ಎಂದು ಹೇಳಿದರು.

ಹಿರಿಯ ವಕೀಲ ಎಂ.ಬಿ.ಶಿವಾನಂದಪ್ಪ, ಕಕ್ಷಿದಾರರ ನೋವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ಕೊಡಿಸುವಲ್ಲಿ ಮುಂದಾಗಬೇಕು ಎಂದು ಕರೆ ನೀಡಿದರು. ಮತ್ತೋರ್ವ ಹಿರಿಯ ವಕೀಲ ಹೆಚ್.ಎನ್.ರಾಜಶೇಖರಪ್ಪ, ವಕೀಲರು ಭಾಷೆ ಮೇಲೆ ಪ್ರೌಢಿಮೆ ಸಾಧಿಸುವುದು ಅಗತ್ಯ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಕ್ಕಳ ಸ್ನೇಹಿ ನ್ಯಾಯಾಧೀಶರಾದ ಶ್ರೀಪಾದ್, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎ.ಆರ್. ಪ್ರಸನ್ನ ಕುಮಾರ್, ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ.ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್.ಬಸವರಾಜ್, ಸಹಕಾರ್ಯದರ್ಶಿ ಎ.ಎಸ್. ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ್ ಕಟಗಿಹಳ್ಳಿ ಮಠ, ಅಜ್ಜಯ್ಯ ಬಿ., ಚೌಡಪ್ಪ ಎಂ. ನಾಗರಾಜ್, ನೀಲಕಂಠಯ್ಯ ಕೆ.ಎಂ., ಭಾಗ್ಯಲಕ್ಷ್ಮಿ ಆರ್, ರಾಘವೇಂದ್ರ ಎಂ., ಸಂತೊಷ್ ಕುಮಾರ್ ಜಿ.ಜೆ ಇತರರು ಇದ್ದರು.

ಕಾರ್ಯಕ್ರಮದಲ್ಲಿ ಹಿರಿಯ ವಕೀಲರಾದ ಎಚ್.ಎನ್.ರಾಜಶೇಖರಪ್ಪ, ಎಂ.ಬಿ. ಶಿವಾನಂದಪ್ಪ ಹಾಗೂ ರಾಮಚಂದ್ರ ಕಲಾಲ್ ಅವರನ್ನು ಸನ್ಮಾನಿಸಲಾಯಿತು.


ನಿವೃತ್ತ ಶಿಕ್ಷಕ ವಾಸುಪಾಲ್ ಜೆ. ನಿಧನ



ದಾವಣಗೆರೆ, 3683/39ಬಿ, ಸಂತೋಷ್ ನಿಲಯ 7ನೇ ಕ್ರಾಸ್, ಆಂಜನೇಯ ಬಡಾವಣೆ ವಾಸಿ

ವಾಸುಪಾಲ್ ಜೆ. (ನಿವೃತ್ತ ಶಿಕ್ಷಕರು)

ಇವರು, ದಿನಾಂಕ 06.12.2023ರ ಬುಧವಾರ ಬೆಳಿಗ್ಗೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 90 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.12.2023ರ ಗುರುವಾರ ಮಧ್ಯಾಹ್ನ 3 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಸುರೇಶ್ ಜೈನ್ ಹಾಗೂ ಕುಟುಂಬ ವರ್ಗ

ಮೊ : 98444 68767